# ಮಂಗಲ ಶ್ಲೋಕಗಳು

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ॥
ಪ್ರಸನ್ನವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥೧॥

ಸರ್ವವಿಘ್ನ ಪ್ರಶಮನಂ ಸರ್ವ ಸಿದ್ಧಿಕರಂ ಪರಂ ।
ಸರ್ವಜೀವ ಪ್ರಣೇತಾರಂ ವಂದೇ ವಿಜಯದಂ ಹರಿಮ್ ॥೨॥

ಸಮ ಚರಣ ಸರೋಜಂ ಸಾಂದ್ರ ನೀಲಾಂಬುದಾಭಂ
ಜಘನ ನಿಹಿತ ಪಾಣಿಂ ಮಂಡನಂ ಮಂಡನಾನಾಂ ॥
ತರುಣ ತುಲಸಿ ಮಾಲಾ ಕಂಧರಂ ಕಂಜ ನೇತ್ರಂ
ಸದಯ ಧವಲಹಾಸಂ ವಿಠಲಂ ಚಿಂತಯಾಮಿ ॥೩॥

ಶ್ರೀಮತ್ ಸೌಭಾಗ್ಯ ಜನನೀಂ ಸ್ತೌಮಿ ಲಕ್ಷ್ಮೀ ಸನಾತನೀಂ ॥
ಸರ್ವ ಕಾಮ ಫಲಾವಾಪ್ತೀಸಾಧನ ಸುಖಾವಹಾಮ್ ॥೪॥

ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಮರೋಗತಾ ॥
ಅಜಾಡ್ಯಂ ವಾಕ್ಪಟುತ್ವಂಚ ಹನೂಮತ್ ಸ್ಮರಣಾದ್ಭವೇತ್ ॥೫॥

ಮಿಥ್ಯಾ ಸಿದ್ಧಾಂತ ದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ ।
ಜಯತೀರ್ಥಾಖ್ಯ ತರಣಿರ್ಭಾಸತಾಂನೋ ಹೃದಂಬರೇ ॥೬॥

ಕಂಸಧ್ವಂಸಿ ಪದಾಂಭೋಜ ಸಂಸಕ್ತೋ ಹಂಸ ಪುಂಗವಃ ।
ಬ್ರಹ್ಮಣ್ಯಗುರುರಾಜಾಖ್ಯೋ ವರ್ತತಾಂ ಮಮ ಮಾನಸೇ ॥೭॥

ಕಾಲೇ ಫಲತಿ ಸುರದ್ರುಃ ಚಿಂತಾಮಣಿರಪಿ ಯಾಚನೇ ದಾ
ವರ್ಷತಿ ಸಕಲಮಭೀಷ್ಟಂ ದರ್ಶನಾತ್ ಶ್ರೀಪಾದರಾಜಃ ॥೮॥

ಅರ್ಥಿಕಲ್ಪಿತಕಲ್ಪೋಯಂ ಪ್ರತ್ಯರ್ಥಿ ಗಜ ಕೇಸರಿ
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥೯॥

ತಪೋವಿದ್ಯಾವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್ ॥೧೦॥

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರಚಾಯಚ
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥೧೧॥

ಶ್ರೀ ಸತ್ಯಬೋಧೋ ನಿಜ ಕಾಮಧೇನುಃ
ಮಾಯಾಮತ ಖಂಡನ ಚಂಡ ಭಾನುಃ ।
ದುರಂತ ಪಾಪ ಪ್ರದಹೇ ಕೃಶಾನುಃ ।
ದೇಯಾನ್ಮಮೇಷ್ಟಂ ಗುರುರಾಜಸೂನುಃ ॥೧೨॥

ಮನ್ಮನೋಭೀಷ್ಟ ವರದಂ ಸರ್ವಾಭೀಷ್ಟ ಫಲ ಪ್ರದಂ ।
ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥೧೩॥

ಅಜ್ಞಾನ ತಿಮಿರಚ್ಛೇದಂ ಬುದ್ಧಿಸಂಪತ್ ಪ್ರದಾಯಕಂ ।
ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯ ಗುರುಂ ಭಜೇ ॥೧೪॥

ಗೋಪ ಪ್ರಖರಸಂಕಾಶಂ ಗೋಪಾಲಾರ್ಚನ ತತ್ಪರಂ ।
ಗೋದೇವ ವಂದ್ಯ ಪಾದಾಬ್ಜಂ ಗೋಪಾಲಾಖ್ಯ ಗುರುಂ ಭಜೆ ॥೧೫॥

ಜಲಜೇಷ್ಟ ನಿಭಾಕಾರಂ ಜಗದೀಶ ಪದಾಶ್ರಯಂ ।
ಜಗತೀತಲ ವಿಖ್ಯಾತಂ ಜಗನ್ನಾಥ ಗುರುಂ ಭಜೇ ॥೧೬॥

* * *



# ೧. ದಾಸಸಾಹಿತ್ಯ ಧ್ವಜಾರೋಹಣ ಗೀತೆ

**ರಾಗ : ಮೋಹನ** **ತಾಳ : ಆದಿ**

ಜಯಗಳು ಆಗಲಿ ಅಪಜಯ ಪೋಗಲಿ
ಜಯದೇವಿ ರಮಣ ಒಲಿಯಲಿ ಕೋಲೆ
ಜಯದೇವಿ ರಮಣ ಒಲಿಯಲಿ ನಮ್ಮ ವಿ-
ಜಯರಾಯರ ಕೀರ್ತಿ ಮೆರೆಯಲಿ ಕೋಲೆ ॥ ೧ ॥

ಹರಿಯೆ ಸರ್ವೋತ್ತಮ ಹರಿಯೆ ಪರದೇವತೆ
ಹರಿದಾಸರೆಂಬೊ ಬಿರುದಿನ ಕೋಲೆ
ಹರಿದಾಸರೆಂಬೊ ಬಿರುದಿನ ಹೆಗ್ಗಾಳೆ
ಹಿರಿಬಾಗಿಲೊಳು ನಾವು ನುಡಿಸೇವು ಕೋಲೆ ॥ ೨ ॥

ಪನ್ನಗ ಶಯನ ಸುಪರ್ಣ ವಾಹನ
ಸುಪರ್ಣ ವಾಹನ ಸುಖ ಪೂರ್ಣ ಕೋಲೆ
ಸುಪರ್ಣ ವಾಹನ ಸುಖ ಪೂರ್ಣನಾದ
ಮೋಹನ ವಿಠಲ ಕರುಣಿಸು ಕೋಲೆ ॥ ೩ ॥

* * *

## ೨. ದಾಸನ ಮಾಡಿಕೋ ಎನ್ನ

**ರಾಗ : ನಾದನಾಮಕ್ರಿಯೆ** **ತಾಳ : ಆದಿ**

ದಾಸನ್ನ ಮಾಡಿಕೋ ಎನ್ನಾ । ಸ್ವಾಮಿ ।
ಸಾಸಿರ ನಾಮದ ವೆಂಕಟರಮಣಾ ॥ ॥ ಪ ॥

ದುರುಬುದ್ಧಿಗಳನೆಲ್ಲ ಬಿಡಿಸೋ । ನಿನ್ನ ।
ಕರುಣ ಕವಚವೆನ್ನ ಹರಣಕ್ಕೆ ತೊಡಿಸೋ ।
ಚರಣ ಸೇವೆಯ ಎನಗೆ ಕೊಡಿಸೋ । ಅಭಯ–
ಕರಪುಷ್ಪವನು ಎನ್ನ ಶಿರದಲ್ಲಿ ಮುಡಿಸೋ ॥ ೧ ॥

ದೃಢ ಭಕ್ತಿ ನಿನ್ನಲ್ಲಿ ಬೇಡೀ । ನಾ ।
ನಡಿಗೆರುಗುವೆನಯ್ಯ ಅನುದಿನ ಪಾಡೀ ।
ಕಡೆಗಣ್ಣೆಲೇಕೆನ್ನ ನೋಡೀ । ಬಿಡುವೆ ।
ಕೊಡು ನಿನ್ನ ಧ್ಯಾನವ ಮನ ಶುಚಿ ಮಾಡೀ ॥ ॥ ೨ ॥

ಮೊರೆ ಹೊಕ್ಕವರ ಕಾವ ಬಿರುದೂ । ಎನ್ನ ।
ಮರೆಯದೆ ರಕ್ಷಣೆ ಮಾಡಯ್ಯ ಪೊರೆದೂ ।
ದುರಿತಗಳೆಲ್ಲವ ತರಿದೂ । ಸಿರಿ–
ಪುರಂದರ ವಿಟ್ಠಲ ಎನ್ನನು ಪೊರೆದೂ ॥ ॥ ೩ ॥

* * *



## ೩. ಸತತ ಗಣನಾಥ

**ರಾಗ : ನಾಟ** **ತಾಳ : ಆದಿ**

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತಿ ದೇವೀ, ಮು–
ಕುತಿ ಪಥಕೆ ಮನವೀವ ಮಹರುದ್ರ ದೇವರು ಭ–
ಕುತಿದಾಯಕಳು ಭಾರತೀದೇವಿ, ಯು–
ಕುತಿಶಾಸ್ತ್ರಗಳಲ್ಲಿ ವನಜಸಂಭವನರಸಿ ।
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು ।
ಗತಿಪಾಲಿಸುವ ನಮ್ಮ ಪವಮಾನನು ॥
ಚಿತ್ತದಲ್ಲಿ ಆನಂದ ಸುಖವನೀವವಳು ರಮಾ
ಭಕ್ತ ಜನರೊಡೆಯ ನಮ್ಮ ಪುರಂದರ ವಿಟ್ಠಲನು
ಸತತ ಇವರಲಿ ನಿಂತು ಕೃತಿಯ ನಡೆಸುವನು

* * *

## ೪. ಗುರುಮಧ್ವರಾಯರು

**ರಾಗ : ಸಿಂಧು ಭೈರವಿ** **ತಾಳ : ಆದಿ**

ಗುರು ಮಧ್ವರಾಯರಿಗೆ ನಮೋ ನಮೋ । ನಮ್ಮ
ಗುರು ಮಧ್ವ ಸಂತತಿಗೆ ನಮೋ ನಮೋ ॥ ಪ ॥

ಗುರು ಮಧ್ವರಾಯರಿಗೆ ನಮೋ ನಮೋ । ನಮ್ಮ
ಗುರು ಜಯರಾಯರಿಗೆ ನಮೋ

ಶಿರಿಪಾದರಾಜರಿಗೆ ಗುರು ವ್ಯಾಸರಾಜರಿಗೆ ।
ಗುರು ವಾದಿರಾಜರಿಗೆ ನಮೋ ನಮೋ ॥ ॥ ೧ ॥

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ
ಪುರಂದರದಾಸರಿಗೆ ನಮೋ ನಮೋ ॥ ॥ ೨ ॥

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ ।
ರಂಗವಲ್ಲಿ ದಾಸರಿಗೆ ನಮೋ ನಮೋ ॥ ॥ ೩ ॥

ಪರಮ ವೈರಾಗ್ಯಶಾಲಿ ತಿಮ್ಮಣದಾಸರಿಗೆ ।
ಮರಳಿಹುಂಡೇಕಾರರಿಗೆ ನಮೋ ನಮೋ ॥ ॥ ೪ ॥

ಗುರು ಶ್ರೀಶ ವಿಟ್ಠಲನ ಪರಮ ಭಕ್ತರ ಚರಣ–
ಸರಸಿಜಯುಗಳಿಗೆ ನಮೋ ನಮೋ ॥ ॥ ೫ ॥

* * *



## ೫. ಸತ್ಯಂ ಜಗತಿದು ಪಂಚ ಭೇದವು

**ರಾಗ : ಕಲ್ಯಾಣಿ** **ತಾಳ : ಆದಿ**

ಸತ್ಯಂ ಜಗತಿದು ಪಂಚ ಭೇದವು ನಿತ್ಯ ಶ್ರೀ ಗೋವಿಂದನಾ ॥ಪ॥
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ಅಪ॥

ಜೀವ ಈಶಗೆ ಭೇದ, ಸರ್ವತ್ರ, ಜೀವ ಜೀವರ ಭೇದವು ।
ಜೀವ ಜಡಕೆ ಭೇದ ಸರ್ವತ್ರ ಜಡ ಜಡಾ ಪರಮಾತ್ಮಗೆ ॥ ॥೧॥

ಮಾನುಷೋತ್ತಮಗಧಿಪ ಕ್ಷಿತಿಪರು ಮನುಜ ದೇವ ಗಂಧರ್ವರು ।
ಜ್ಞಾನಿ ಪಿತ್ರಾಜಾನ ಕರ್ಮಜ ದಾನವಾರಿ ತತ್ತ್ವಾತ್ಮರು ॥ ॥೨॥

ಗಣಪ ಮಿತ್ರರು ಸಪ್ತ ಋಷಿಗಳು ವಹ್ನಿ ನಾರದ ವರುಣನು ।
ಇನಜಗೆ ಸಮ ಚಂದ್ರಸೂರ್ಯರು ಮನುಸತಿಗೆ ಹೆಚ್ಚು ಪ್ರವಹನು ॥ ॥೩॥

ದಕ್ಷಸಮ ಅನಿರುದ್ಧ ಗುರು ಶಚಿ ರತಿ ಸ್ವಾಯಂಭುವರಾರ್ವರು ।
ಉಕ್ತ ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು ॥ ॥೪॥

ದೇವ ಇಂದ್ರಗೆ ಅಧಿಕ ಮಹರುದ್ರ ದೇವರಿಗೆ ಸಮ ಗರುಡನು ।
ಕೇವಲಧಿಕರು ಶೇಷ ಗರುಡಗೆ ದೇವಿ ಭಾರತಿ ಸರಸ್ವತಿ ॥ ॥೫॥

ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು ।
ವಾಯು ಬ್ರಹ್ಮಗೆ ಕೋಟಿ ಗುಣದಿಂದಧಿಕ ಶಕ್ತಳು ಶ್ರೀರಮಾ ॥ ॥೬॥

ಅನಂತನಂತಾ ಗುಣದಿ ಲಕುಮಿಗೆ ಅಧಿಕ ಪುರಂದರ ವಿಠಲನು ।
ಘನರು ಸಮರಾರಿಲ್ಲ ಜಗದೊಳು ಹನುಮ ಹೃತ್ಪದ್ಮವಾಸಿಗೆ ॥ ॥೭॥

* * *

## ೬. ಶ್ರೀಗಣಪತಿ

**ರಾಗ : ಮೋಹನ** **ತಾಳ : ಆದಿ**

ವಂದಿಪೆ ನಿನಗೆ ಗಣನಾಥಾ ।
ಮೊದಲ್ ವಂದಿಪೆ ನಿನಗೆ ಗಣನಾಥಾ ॥ ॥ ಪ ॥

ಬಂದ ವಿಘ್ನ ಕಳೆಯೋ ಗಣನಾಥಾ ॥ ॥ ಅಪ ॥

ಹಿಂದೆ ರಾವಣನು ಮದ
ದಿಂದ ನಿನ್ನ ಪೂಜಿಸದೆ
ಬೆಂದ ರಣದಲಿ ಗಣನಾಥಾ ॥ ॥ ೧ ॥

ಆದಿಯಲ್ಲಿ ಧರ್ಮ ರಾಜ
ಮೋದದಿಂದ ಪೂಜಿಸಲು
ಸಾಧಿಸಿದ ರಾಜ್ಯ ಗಣನಾಥಾ ॥ ॥ ೨ ॥

ಮಂಗಳ ಮೂರುತಿ ಸಿರಿ
ರಂಗ ವಿಟ್ಠಲನ್ನ ಪಾದ
ಭೃಂಗನೆ ಪಾಲಿಸೋ ಗಣನಾಥಾ ॥ ೩ ॥

* * *



## ೭. ಶ್ರೀ ಪಾರ್ವತೀ ದೇವಿ

**ರಾಗ : ಮೋಹನ** **ತಾಳ : ಆದಿ**

ಪಾರ್ವತಿ ಪಾಲಿಸೆನ್ನ । ಮಾನುನಿರನ್ನೆ ॥ ॥ ಪ ॥
ಪಾರ್ವತಿ ಪಾಲಿಸೆನ್ನ ॥

ಪಾರ್ವತಿ ಭಕುತರ ಸಾರಥಿ ವಂದಿಪೆ ॥
ಸುರಪತಿ ಷಣ್ಮುಖ ಗಣಪರ ಮಾತೆ ॥ ॥ ಅ ಪ ॥

ಮನಕಭಿಮಾನಿಯೆ । ನೆನೆವನು ನಿನ್ನನು
ಅನುಗ್ರಹಿಸೆನ್ನನು ಅಂಬುಜಪಾಣಿ ॥ ॥ ೧ ॥

ಮಂಗಳೇ ಮೃಢನಂತರಂಗಳೆ ಹರಿಪದ ।
ಭೃಂಗಳೆ ತುಂಗಳೆ ಪನ್ನಂಗ ವೇಣಿ ॥ ॥ ೨ ॥

ಗುಣಪೂರ್ಣ ವೇಣುಗೋಪಾಲ ವಿಠಲನ ।
ಕಾಣಿಸಿಕೊಂಡುವಂಥ ಶೂಲಿಯರಾಣಿ ॥ ॥ ೩ ॥

* * *

## ೮. ಶ್ರೀರುದ್ರದೇವರು

**ರಾಗ : ಹಂಸಧ್ವನಿ** **ತಾಳ : ಆದಿ**

ಕೈಲಾಸವಾಸ ಗೌರೀಶ ಈಶ ॥ ಪ ॥
ತೈಲ ಧಾರೆಯಂತೆ ಮನವಕೊಡು ಹರಿಯಲ್ಲಿ ಶಂಭೋ ॥ ಅ ಪ ॥

ಅಹೋರಾತ್ರಿಯಲಿ ನಾನು ಅನಾಚರಾಗ್ರಣಿಯಾಗಿ ।
ಮಹಿಯೊಳಗೆ ಚರಿಸಿದೆನು ಮಹಾದೇವನೇ ॥
ಅಹಿಭೂಷಣನೆ ಎನ್ನ ಅವಗುಣಗಳೆಣಿಸದೆಲೆ ।
ವಿಹಿತ ಧರ್ಮದಿ ವಿಷ್ಣು ಭಕುತಿಯನು ಕೊಡು ಶಂಭೋ ॥ ॥ ೧ ॥

ಮನಸು ಕಾರಣವಲ್ಲ ಪಾಪ ಪುಣ್ಯಕ್ಕೆಲ್ಲ ।
ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ ॥
ದನುಜಮದಗಜ ಹರಿಯೆ ದಂಡಪ್ರಣಾಮವ ಮಾಳ್ಪೆ ।
ಮಣಿಸೋ ಈ ಶಿರವ ಸಜ್ಜನರ ಶಿರಿಚರಣದಲಿ ಶಂಭೋ ॥ ॥ ೨ ॥

ಭಾಗೀರಥೀ ಧರನೆ ಭವಭಯವ ಪರಿಹರಿಸೊ ।
ಲೇಸಾಗಿ ನೀ ಸಲಹೋ ಶರ್ವದೇವಾ ॥
ಭಾಗವತ ಜನಪ್ರೀಯ ವಿಜಯವಿಟ್ಠಲನಂಘ್ರಿ ।
ಜಾಗುಮಾಡದೆ ಭಜಿಪ ಭಾಗ್ಯವನು ಕೊಡು ಶಂಭೋ ॥ ॥ ೩ ॥

* * *



## ೯. ಶ್ರೀ ಶೇಷದೇವರು

**ರಾಗ : ಕಾಂಬೋಧಿ** **ತಾಳ : ಝಂಪೆ**

ಬಲು ರಮ್ಯವಾಗಿದೆ ಶ್ರೀ ಹರಿಯ ಮಂಚ ॥ ಪ ॥
ಎಲರುಣಿ ಕುಲರಾಜ ರಾಜೇಶ್ವರನ ಮಂಚ ॥ ಅ ಪ ॥

ಪವನ ತನಯನು ಎನಿಪ ಪಾವನತರ ಮಂಚ ।
ಭುವನತ್ರಯವನು ಪೊತ್ತ ಭಾರಿ ಮಂಚ ॥
ಕಿವಿಗಳಿಲ್ಲದ ಮಂಚ ಶ್ರೀನಿಕೇತನ ಮಂಚ ।
ಶಿವರೂಪದಲಿ ಹರಿಯನೊಲಿಸಿದಾ ಮಂಚ ॥ ॥ ೧ ॥

ನೀಲಾಂಬರವನುಟ್ಟು ನಳನಳಿಸುವಾ ಮಂಚ ।
ನಾಲಿಗೆ ಎರಡುಳ್ಳ ನೈಜ ಮಂಚ ॥
ನಾಲ್ವತ್ತು ಕಲ್ಪದೀ ತಪವ ಮಾಡಿದ ಮಂಚ ।
ತಾಲಮುಸಲಾಯುಧವ ಪಿಡಿದಿಹ ಮಂಚ ॥ ॥ ೨ ॥

ರಾಮನನುಜನಾಗಿ ರಣವ ಜಯಸಿದ ಮಂಚ ।
ತಾಮಸ ರುದ್ರನ ಪಡೆದ ಮಂಚ ॥
ಭೀಮನಾನುಜನಲ್ಲಿ ಆವೇಶಿಸಿದ ಮಂಚ ।
ಜೀಮೂತ ಮಲ್ಲರನು ಕುಟ್ಟಿದ ಮಂಚ॥ ॥ ೩ ॥

ಜೀವನಾಮಕನಾಗಿ ವ್ಯಾಪ್ತನಾದ ಹರಿಯ ।
ಸೇವಿಸಿ ಸುಖಿಸುವ ದಿವ್ಯ ಮಂಚ ॥
ಸಾವಿರ ಮುಖದಿಂದ ತುತಿಸಿ ಹಿಗ್ಗುವ ಮಂಚ ।
ದೇವಕಿಯ ಜಠರದಿ ಜನಿಸಿದಾ ಮಂಚ ॥ ॥ ೪ ॥

ವಾರುಣೀದೇವಿಗೇ ವರನೆನಿಸಿದಾ ಮಂಚ ।
ಸಾರುವ ಭಕ್ತರ ಪೊರೆವ ಮಂಚ ॥
ಕಾರುಣ್ಯನಿಧಿ ಜಗನ್ನಾಥ ವಿಠಲನ ।
ವಿಹಾರಕ್ಕೆ ಯೋಗ್ಯವಾದ ಶೇಷಮಂಚ ॥ ॥ ೫ ॥

* * *

# ೧೦. ಶ್ರೀ ಗರುಡದೇವರು

**ರಾಗ : ಕಾಂಭೋದಿ** **ತಾಳ : ಝಂಪೆ**

ಅತಿ ಶೋಭಿಸುತಿದೆ ಶ್ರೀ ಪತಿ ವಾಹನಾ
ಚತುರದಶ ಲೋಕಕಪ್ರತಿ ವಾಹನಾ ॥ ಪಲ್ಲ ॥

ಕಾಲನಾಮಕನಾಗಿ ಕಮಲಭವನದಲಿ ಜನಿಸಿ।
ಕಾಲಾತ್ಮ ಹರಿಯ ಸೇವಿಪ ವಾಹನಾ ॥
ಕಾಳಗದಿ ಕಪಿವರರ ಕಟ್ಟು ಬಿಡಿಸಿದ ವಾಹನಾ ।
ವಾಲಿಖಿಲ್ಯರ ವರವಪಡೆದ ವಾಹನಾ ॥ ೧ ॥

ವಿನುತ ಕಶ್ಯಪ ಋಷಿಯ ತನಯನೆನಿಸಿದ ವಾಹನಾ ॥
ಅನುಜರನು ಕದ್ದೊಯ್ದ ಆಢ್ಯ ವಾಹನಾ ।
ವನಧಿ ಮಧ್ಯದಿ ನಾವಿಕರ ಭಕ್ಷಿಸಿದ ವಾಹನಾ ।
ಜನಕನಾಜ್ಞಧಿ ಕೂರ್ಮಗಜ ನುಂಗಿದ ವಾಹನಾ ॥ ೨ ॥

ಕೂಪಾರದೆಡೆಗೆ ಮಂದಾರ ಒಯ್ದ ವಾಹನ ನಿಜ ॥
ರೂಪದಿಂ ಹರಿಸೇವೆ ಗೈಯ್ದ ವಾಹನಾ।
ಆ ಪಿತೃಗಳಿಗಮೃತ ಪ್ರಾಪ್ತಮಾಡಿದ ವಾಹನಾ ॥
ಸೌಪರ್ಣಿ ಪತಿಯೆಂಬ ಪೊಂಬಣ್ಣದ್ವಾಹನಾ ॥ ೩ ॥

ಕುಲಿಶಪಾಣಿಯಕೂಡೆ ಕಲಹ ಮಾಡಿದ ವಾಹನಾ॥
ಒಳಪೊಕ್ಕು ಪೀಯೂಷ ತಂದ ವಾಹನಾ ।
ಮಲತಾಯಿ ಮಕ್ಕಳನು ಮರಳುಗೊಳಿಸಿದ ವಾಹನಾ ।
ಬಲಿರಾಜನೊಯ್ದ ಮುಕುಟವ ತಂದ ವಾಹನಾ ॥ ೪ ॥

ಪನ್ನಗಾಶನನಾದ ಪತಿತಪಾವನ ವಾಹನಾ ।
ಸನ್ನುತಿಪ ಸಜ್ಜನರ ಪೊರೆವ ವಾಹನಾ ।
ಪನ್ನಗಾಚಲವಾಸ ಜಗನ್ನಾಥ ವಿಟ್ಠಲಗೆ ।
ಉನ್ನಂತ ಪ್ರಿಯವಾದ ಗರುಡ ವಾಹನಾ ॥ ೫ ॥

* * *



# ೧೧. ಶ್ರೀ ಭಾರತೀದೇವಿ

**ರಾಗ : ಪಠ** **ತಾಳ : .......**

ಭಾರತಿದೇವಿಯ ನೆನೆ ನೆನೆ ।
ನಿರುತಭಕುತಿಗಿದು ಮನೆ ಮನೆ ॥ ಪ ॥

ಮಾರುತನರ್ಧಾಂಗಿ ಸುಚರಿತ ಕೋಮಲಾಂಗಿ ।
ಸಾರಸಾಕ್ಷಿ ಅಪಾಂಗಿ ಉಪಾಂಗಿ ॥ ॥ ೧ ॥

ಕಿಂಕಿಣಿ ಕಿಣಿ ಕಿಣಿ ಪದ । ಪಂಕಜನೂಪುರ ।
ಕಂಕಣ ಕುಂಡಲಾಲಂಕೃತ ದೇಹ ॥ ॥ ೨ ॥

ಶಂಕರಸುರವರ ವಂದಿತ ಚರಣೆ ।
ಪೊಂಕಿತ ಪುರಂದರ ವಿಠಲನ ಶರಣೆ ॥ ॥ ೩ ॥

* * *

# ೧೨. ಶ್ರೀ ಸರಸ್ವತಿ ದೇವಿ

ಶಾರದೆ ಮಜ್ಜನನಿಯೆ – ಶಾರದೆ ।
ಶಾರದೆ ಮಜ್ಜನನಿಯೇ – ಶಾರದೆ ॥ ಪ ॥

ಶಾರದೆ ಶರಣೆಂಬೆ ನಿನ್ನ । ಚರಣ
ನೀರಜ ದ್ವಂದಕೆ ಯನ್ನ । ಆಹ
ಕಾರುಣ್ಯದಲಿ ಹೃದಯ । ವಾರಿಜದೊಳು ಮೆರೆವ
ಮಾರಮಣನ ದಿವ್ಯ । ಮೂರುತಿ ತೋರಿಸೆ ॥ ॥ಅಪ॥

ವಾಣಿ ನಿಲ್ವುದು ಎನ್ನವದನಾ। ದಲ್ಲಿ
ನೀ ನುಡಿಸೇ ಹರಿ ಗಾನಾ। ಕರ
ವೀಣೆ ನುಡಿಪಂತೆ ಯನ್ನಾ। ದೇಹ
ವೀಣೆ ನುಡಿಸೆ ನೀ ಮುನ್ನಾ। ಆಹ
ವೇಣಿ ಮಾಧವನಾದ। ಶ್ರೀನಿವಾಸನ ಕಾಂಬ
ಜ್ಞಾನಾನು ಸಂಧಾನ। ಮಾಣದೆ ಎನಗೀಯೆ॥ ॥ ೧ ॥

ಅಜ್ಞಾರೊಳಾಗ್ರಣಿ ನಾನೂ। ಇಂಗಿ
ತಜ್ಞಳೆ ನಾ ಪೇಳ್ವುದೇನೂ। ಆ
ಭಿಜ್ಞರೊಳಿರಿಸುವುದಿನ್ನೂ। ಸರು
ವಜ್ಞರ ಮಾತತಿಳಿಸಿನ್ನೂ। ಆಹಾ
ವಿಜ್ಞಾನ ಸುಖಬ್ರಹ್ಮ। ಯಜ್ಞಾನ ಜಗಕೆಂಬ
ಸುಜ್ಞಾನ ಸುಖವಿತ್ತು ಪ್ರಜ್ಞನ್ನ ಕಾಣಿಸೇ॥ ॥ ೨ ॥

ವ್ರತನೇಮ ಉಪವಾಸ ಒಂದೂ। ಮಾಡಿ
ಕೃತಕೃತ್ಯನಲ್ಲಮ್ಮ ಬಂದೂ। ಕೃತಿ
ಪತಿಯೆ ಎನಗೆ ಗತಿಯೆಂದು। ದ್ವಂದ್ವ
ಕೃತಿಗಳ ನರ್ಪಿಪನೆಂದೂ। ಆಹ
ಹಿತದಿ ತಿಳಿಸಿ ಗುರು। ಗೋವಿಂದ ವಿಠಲನ
ಸುತನಾಗಿ ಮರೆವಂಥ। ಚತುರಾಸ್ಯ ಪ್ರಿಯರಾಣಿ ॥ ॥ ೩ ॥

* * *



# ೧೩. ಶ್ರೀ ಆನಂದತೀರ್ಥರು

**ರಾಗ : ಖರಹರಪ್ರಿಯ** **ತಾಳ : ಆದಿ**

ಆನಂದತೀರ್ಥರೆಂಬೊ ಅರ್ಥೀಯ ಪೆಸರುಳ್ಳ । ಗುರುಮಧ್ವ ಮುನಿರಾಯಾ ।
ಏನೆಂಬೆ ನಾ ನಿನ್ನ ಕರುಣಕ್ಕೆ ಎಣೆಗಾಣೆ । ಗುರುಮಧ್ವ ಮುನಿರಾಯಾ ॥ ॥ಪ॥

ಬೇಸರದೆ ಸರ್ವರೊಳು । ಶ್ವಾಸ ಜಪಗಳ ಮಾಡಿ । ಗುರುಮಧ್ವ ಮುನಿರಾಯಾ ।
ಶ್ರೀಶಗರ್ಪಿಸುತ ನಿನ್ನ । ದಾಸರನ್ನು ಸಲಹಿದೆ । ಗುರುಮಧ್ವ ಮುನಿರಾಯಾ ॥ ॥೧॥

ಅಂದು ಹನುಮಂತನಾಗಿ । ಬಂದು ಸುಗ್ರೀವನಿಗೆ । ಗುರುಮಧ್ವ ಮುನಿರಾಯಾ ।
ಅಂದವಾದ ಪದವಿತ್ತಾನಂದದಿಂದ ಸಲಹಿದೆ । ಗುರುಮಧ್ವ ಮುನಿರಾಯಾ ॥ ॥೨॥

ಕುಂತಿಯ ಕುಮಾರನಾಗಿ । ಹಂತ ಕೌರವರ ಕೊಂದೆ । ಗುರುಮಧ್ವ ಮುನಿರಾಯಾ ।
ಅಂತು ಪುಣ್ಯಗಳಿಸಿ ಶ್ರೀ । ಕಾಂತನಿಗೆ ಅರ್ಪಿಸಿದೆ । ಗುರುಮಧ್ವ ಮುನಿರಾಯಾ ॥ ॥೩॥

ಅದ್ವೈತರನು ಕಾದಿ । ಗೆದ್ದು ನಿನ್ನ ಭಕ್ತರಿಗೆ । ಗುರುಮಧ್ವ ಮುನಿರಾಯಾ ।
ಶುದ್ಧ ತಾತ್ಪರ್ಯವಾಕ್ಯ । ಪದ್ಧತಿಯ ತೋರಿಸಿದಿ । ಗುರುಮಧ್ವ ಮುನಿರಾಯಾ ॥ ॥೪॥

ಗುರುಪ್ರಾಣೇಶ ವಿಠಲ । ಪರನೆಂದು ಡಂಗುರುವ । ಗುರುಮಧ್ವ ಮುನಿರಾಯಾ ।
ಸಾರಿ ಸಜ್ಜನರಿಗೆ । ಹರಿಯ ಲೋಕ ತೋರಿಸಿದಿ । ಗುರುಮಧ್ವ ಮುನಿರಾಯಾ ॥ ॥೫॥

* * *

# ೧೪. ಅಂಜಿಕಿನ್ಯಾತಕಯ್ಯಾ

**ರಾಗ : ಕಲ್ಯಾಣಿ** **ತಾಳ : ಖಂಡಛಾಪು**

ಅಂಜಿಕಿನ್ಯಾತಕಯ್ಯಾ । ಸಜ್ಜನರಿಗೆ । ಭಯವು ಇನ್ಯಾತಕಯ್ಯಾ । ॥ ಪ ॥

ಸಂಜೀವರಾಯರ । ಸ್ಮರಣೆ ಮಾಡಿದ ಮೇಲೆ ॥ ಅ ಪ ॥

ಕನಸಲಿ ಮನಸಲಿ ಕಳವಳವಾದರೆ ।
ಹನುಮನ ನೆನದರೆ ಹಾರಿ ಹೋಗದೆ ಪಾಪ ॥ ॥ ೧ ॥

ರೋಮರೋಮಕೆ ಕೋಟಿ ಲಿಂಗ ಉದರಿಸಿದ ।
ಭೀಮನ ನೆನದರೆ ಬಿಟ್ಟು ಪೋಗದೆ ಪಾಪ ॥ ॥ ೨ ॥

ಪುರಂದರ ವಿಠಲನ ಪೂಜೆಯ ಮಾಡುವ ।
ಗುರು ಮಧ್ವರಾಯರ ಸ್ಮರಣೆ ಮಾಡಿದಮೇಲೆ ॥ ॥ ೩ ॥

* * *



# ೧೫. ಭಾಗ್ಯದ ಲಕ್ಷ್ಮಿ ಬಾರಮ್ಮ

ಭಾಗ್ಯದ ಲಕ್ಷ್ಮಿ ಬಾರಮ್ಮ
ನಮ್ಮಮ್ಮ ನೀ ಸೌಭಾಗ್ಯಾದ ಲಕ್ಷ್ಮಿ ಬಾರಮ್ಮ ॥ ಪ ॥

ಹೆಜ್ಜೆಯ ಮೇಲೊಂದ್ಹೆಜ್ಜೆಯ ನಿಕ್ಕುತ
ಗೆಜ್ಜೆಯ ಕಾಲಿನ ನಾದವ ತೋರುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥ ॥ ೧ ॥

ಕನಕವೃಷ್ಟಿಯಾ ಕರೆಯುತ ಬಾರೆ
ಮನಕಾಮನೆಯ ಸಿದ್ಧಿಯ ತೋರೆ
ದಿನಕರ ಕೋಟಿ ತೇಜದಿ ಹೊಳೆಯುವ
ಜನಕರಾಜನ ಕುಮಾರಿ ಬೇಗಾ ॥ ॥ ೨ ॥

ಅತ್ತಿತ್ತಗಲದೆ ಭಕ್ತರ ಮನೆಯೊಳು
ನಿತ್ಯಮಹೋತ್ಸವ ನಿತ್ಯ ಸುಮಂಗಳ
ಸತ್ಯವ ತೋರುತ ಸಜ್ಜನರಗಲದೆ
ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ ॥ ॥ ೩ ॥

ಶಂಕೆ ಇಲ್ಲದ ಭಾಗ್ಯವ ಕೊಟ್ಟು
ಕಂಕಣಕೈಯ ತಿರುವುತ ಬಾರೆ
ಕುಂಕುಮಾಂಕಿತೆ ಪಂಕಜಲೋಚನೆ
ವೆಂಕಟರಮಣನ ಬಿಂಕದ ರಾಣಿ ॥ ॥ ೪ ॥

ಸಕ್ಕರೆ ತುಪ್ಪ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿರಂಗನ
ಚೊಕ್ಕಪುರಂದರ ವಿಠಲನ ರಾಣಿ ॥ ॥ ೫ ॥

* * *

## ೧೬. ಒಲಿದೆ ಯಾತಕಮ್ಮ ಲಕುಮಿ

ಒಲಿದೆ ಯಾತಕಮ್ಮಾ ಲಕುಮೀ ವಾಸುದೇವಗೇ ॥ ॥ ಪ ॥
ಹಲವಂಗದವನಾ ಹವಣೇ । ತಿಳಿದು ತಿಳಿದೂ ತಿಳಿಯದ್ಹಾಂಗೇ ॥ ॥ ಅ ಪ ॥

ಕಮಲಗಂಧೀ ಕೋಮಲಾಂಗೀ । ಸುಂದರಾಬ್ಜಾವದನೇ ನೀನೂ ।
ರಮಣಮತ್ಸ್ಯಾ ಕಠಿಣಾ ಕಾಯಾ ಸೂಕರಾಸ್ಯನೂ ॥
ರಮಣೀಯಾ ಸ್ವರೂಪೀ ನೀನೂ । ಅಮಿತಘೋರಾ ರೂಪಾನವನೂ ।
ನಮಿಪರಿಷ್ಟಾದಾನೀ ನೀನೂ । ದಾನವನ್ನೂ ಬೇಡೂವವಗೇ ॥ ॥ ೧ ॥

ಜಾಣೆ ರತ್ನಾಕರನಾ ಮಗಳೂ । ನೀನು ಶುದ್ಧಾ ಭೃಗುಜಾನವನೂ ।
ಆನಂದಾಬ್ಜಾಸದನೇ ನೀನೂ । ಕಾನನಾ ವಾಸೀಯೂ ಅವನೂ ॥
ಮಾನೆ ಪತಿವ್ರತೆಯೂ ನೀನೂ । ನಾನಾಯೋಷಿತ್ಕಾಮೀಯವನೂ
ಜ್ಞಾನೆ ಚಿತ್ರವಸನೇ ನೀನೂ । ಹೀನ ಚೈಲಾನಾದವನವಗೇ ॥ ॥ ೨ ॥

ಲಲಿತೆ ಚಾರೂ ಶೀಲೇ ನೀನೂ । ಕಲಕಿ ಕಲಹಾ ಪ್ರೀಯನವನೂ ।
ಕುಲದ ಕುರುಹು ಇಲ್ಲಾ ಗುಣದಾ । ನೆಲೆಯು ಕಂಡಿಲ್ಲಾ ॥
ಹಲವು ಕಾಲದವನೂ ಅವನಾ । ಬಳಗ ಬಂಧೂ ನಿಷ್ಕಿಂಚನರು ।
ಜಲದಿ ಆಲದೆಲೆಯಾ ಮೇಲೇ । ಮಲಗಿ ಬೆರಳಾ ಚೀಪೂವವಗೇ ॥ ॥ ೩ ॥

ಅವನ ವಾರ್ತೇ ಕೇಳೀದವರೂ । ಒಲ್ಲರೂ ಸಂಸಾರವನ್ನೂ ।
ಅವನ ಮೂರ್ತಿಯ ನೋಡೀದವರೂ । ಮನೆಯ ಧನವಾ ಬಿಡುವರೂ ॥
ಅವನ ಪುರಕೇ ಪೋದಾ ಜನರೂ । ಒಮ್ಮೆಗನ್ನಾ ಹಿಂದಿರುಗಿದರೇ ।
ಅವನು ತಾನೇ ತನಯರನ್ನಾ । ತನ್ನವಯವದೀ ಪಡೆಯೂವವಗೇ ॥ ॥ ೪ ॥

ಸ್ವರತಾನಾಪೇಕ್ಷಾಽಕಾಮೀ । ನಿದ್ರಾಹೀನಾ ಅನಶಾನೀಯೂ ।
ಸ್ಪುರುಶ ರೂಪಾ ವಾಚ್ಯಶಬ್ದಾ ಅಮಿತ ಭೋಕ್ತನೂ ॥
ಗುರುಗೋಪಾಲಾ ವಿಟ್ಠಲಾನೂ । ನಿರುತ ತನ್ನಾ ವಕ್ಷಾದೋಳೂ
ಅರಮನೆಯಾ ಮಾಡೀಕೊಟ್ಟೂ । ಮರಳು ಮಾಡಿದ ಮಾಯಾವೀಗೇ॥ ॥ ೫ ॥

* * *



## ೧೭. ಏನು ಧನ್ಯಳೋ ಲಕುಮಿ

**ರಾಗ : ತೋಡಿ** **ತಾಳ : ರೂಪಕ**

ಏನು ಧನ್ಯಳೋ । ಲಕುಮಿ । ಎಂಥಾ ಮಾನ್ಯಳೊ ॥ ॥ಪ॥
ಸಾನುರಾಗದಿಂದ ಹರಿಯ । ತಾನೇ ಸೇವೆ ಮಾಡುತಿಹಳು ॥ಅ ಪ॥

ಕೋಟಿ ಕೋಟಿ ಭೃತ್ಯರಿರಲು । ಹಾಟಕಾಂಬರನ ಸೇವೆ ।
ಸಾಟಿಯಿಲ್ಲದೆ ಮಾಡಿ ಪೂರ್ಣ । ನೋಟದಿಂದ ಸುಖಿಸುತಿಹಳು ॥ ೧ ॥

ಛತ್ರ ಚಾಮರ ವ್ಯಜನ ಪರ್ಯಂಕ । ಪಾತ್ರ ರೂಪದಲ್ಲಿ ನಿಂತು ॥
ಚಿತ್ರ ಚರಿತನಾದ ಹರಿಯ । ನಿತ್ಯ ಸೇವೆ ಮಾಡುತಿಹಳು ॥ ॥ ೨ ॥

ಸರ್ವಸ್ಥಳದಿ ವ್ಯಾಪ್ತನಾದ । ಸರ್ವದೋಷ ರಹಿತನಾದ ।
ಪುರಂದರ ವಿಠಲನ್ನ ಪಾದ । ಸರ್ವಕಾಲದಿ ಸೇವಿಸುವಳು ॥ ॥ ೩ ॥

* * *

## ೧೮. ಬಾರೋ ಮನೆಗೆ ಗೋವಿಂದ

**ರಾಗ : ಮಧ್ಯಮಾಪತಿ** **ತಾಳ : ಆದಿತಾಳ**

ಬಾರೋ ಮನೆಗೆ ಗೋವಿಂದ ।
ನಿನ್ನಂಘ್ರೀ ಕಮಲವ ತೋರೋ ಎನಗೆ ಮುಕುಂದ ।
ನಲಿದಾಡು ಮನದಲಿ, ಮಾರಪಿತನೆ ಆನಂದ । ಆನಂದ ಕಂದ ॥ ॥ ಪ ॥

ಚಾರುತರ ಶರೀರ ಕರುಣಾ । ವಾರನಿಧಿ ಭವ ಘೋರನಾಶನ ।
ವಾರಿಜಾಸನ ವಂದ್ಯ ನೀರಜ । ಸಾರ ಸದ್ಗುಣ ಹೇ ರಮಾಪತೆ ॥ ಅಪ ॥

ನೋಡು ದಯದಿಂದೆನ್ನ । ಕರ ಪದುಮ ಶಿರದಲಿ ।
ನೀಡು ಭಕ್ತ ಪ್ರಸನ್ನ । ನಲಿದಾಡು ಮನದಲಿ ।
ಬೇಡಿಕೊಂಬೆನು ನಿನ್ನ । ಆನಂದ ಘನ್ನ ॥
ಮಾಡದಿರು ಅನುಮಾನವನು । ಕೊಂಡಾಡುವೆನು ತವ ಮಹಿಮೆಗಳನು ।
ಜೋಡಿಸುವೆ ಕರಗಳನು ಚರಣಕೆ । ಕೊಡಿಸೋ ತವ ದಾಸ ಜನರೊಳು ॥ ॥೧॥

ಹೇಸಿ ವಿಷಯಗಳಲಿ । ತೊಳಲಾಡಿ ನಾ ಬಲು ।
ಕ್ಲೇಶ ಪಡುವುದಾ ನೀ ಬಲ್ಲಿ । ಧನ ಯುವತಿಯರ ಸುಖ ।
ಲೇಸು ಎಂಬುದ ಕೊಲ್ಲಿ । ಆಸೆ ಬಿಡಿಸಿಲ್ಲಿ ॥
ಏಸು ಜನ್ಮದ ದೋಷದಿಂದಲಿ, ಈಸುವೆನು ಇದರೊಳಗೆ ಇಂದಿಗೂ ।
ಮೋಸವಾಯಿತು ಆದುದಾಗಲಿ । ಶ್ರೀಶ ನೀ ಕೈ ಬಿಡದೆ ರಕ್ಷಿಸು ॥ ॥೨॥

ನೀನೆ ಗತಿ ಎನಗಿಂದು । ಉದ್ಧರಿಸೊ ಬೇಗನೆ ।
ದೀನ ಜನರಿಗೆ ಬಂಧು । ನಾ ನಿನ್ನ ಸೇವಕ ।
ಶ್ರೀನಿವಾಸ ಎಂದೆಂದೂ । ಕಾರುಣ್ಯ ಸಿಂಧು ॥
ಪ್ರಾಣಪತಿ ಹೃದಯಾಬ್ಜ ಮಂಟಪ । ಸ್ಥಾನದೊಳಗಭಿವ್ಯಾಪ್ತ ಚಿನ್ಮಯ ।
ಧ್ಯಾನಗೋಚರನಾಗು ಕಣ್ಣಿಲಿ, ಕಾಣುವೆನು ಶ್ರೀರಂಗವಿಟಲ । ॥೩॥

* * *



## ೧೯. ಬಾರಯ್ಯ ಶ್ರೀನಿವಾಸ ಭಕ್ತರ ಮನೆಗೆ

**ರಾಗ : ಶಿವರಂಜನಿ** **ತಾಳ : ಆದಿತಾಳ**

ಬಾರಯ್ಯ ಶ್ರೀನಿವಾಸ ಭಕ್ತರ ಮನೆಗೆ
ತೋರಯ್ಯ ನಿಮ್ಮ ದಯ ತೋಯಜಾಂಬಕನೇ ॥ ॥ ಪ ॥

ದುರುಳನ ತರಿದಂಥ ವರಚಕ್ರಧಾರಿ ।
ಪರಮಾತ್ಮ ಪರಬ್ರಹ್ಮ ಪರರಿಗುಪಕಾರಿ ॥ ॥ ೧ ॥

ವರ ಶೇಷಗಿರಿಯಲ್ಲಿ ನಿರುತ ನೀನಿರುವಿ ।
ಹರಿದಾಸರು ಕರೆಯೇ ಎಲ್ಲಿದ್ದರು ಬರುವಿ ॥ ॥ ೨ ॥

ಅನಂತನಾಭನು ಅನ್ನಂತ ಸದ್ಗುಣನು ।
ನೆನೆವರಿಗೊಲಿವಂತ ಹನುಮಂತ ವಿನುತಾ ॥ ॥ ೩ ॥

ಅರಣ್ಯದೊಳಗಿದ್ದ ಕರಿರಾಜಗೊಲಿದ ।
ದುರುಳ ಹಿರಾಣ್ಯಾಕ್ಷನ ಶಿರವನ್ನೆ ತರಿದ ॥ ॥ ೪ ॥

ಅಜಭವಾದಿಪ ನೀನು ವಿಜಯಸಾರಥಿಯೇ ।
ತ್ರಿಜಗವಂದಿತಧೀಶ ವಿಜಯವಿಟ್ಠಲನೇ ॥ ॥ ೫ ॥

* * *

## ೨೦. ಬಾರೋ ಬ್ರಹ್ಮಾದಿ ವಂದ್ಯಾ

**ರಾಗ : ಮಧ್ಯಮವತಿ** **ತಾಳ : ಆದಿ**

ಬಾರೋ ಬ್ರಹ್ಮಾದಿ ವಂದ್ಯಾ । ವಸುದೇವ ಸುತನೇ
ಬಾರೋ ಬ್ರಹ್ಮಾದಿ ವಂದ್ಯಾ ॥ ॥ ಪ ॥ – ೨ ಸಲ

ಗೊಲ್ಲರ ಮನೆಗೆ ಪೋಗಲಿ ಬೇಡ ಗೋವಿಂದ ಕೇಳೊ – ೨ ಸಲ
ನಿನಗೆ
ಹಾಲು ಮೊಸರು ಬೆಣ್ಣೆಯ ಕೊಡುವೆ ಜಾಗು
ಮಾಡದೆ ಬೇಗನೆ ಬಾರೋ – ೨ ಸಲ

ಪಲ್ಲವಿ – ೨ ಸಲ

ಧಿಗಿ ಧಿಗಿ ನೀ ಕುಣಿದಾಡುತ ಬಾರೋ ದೀನ ರಕ್ಷಕನೇ – ೨ ಸಲ
ಚಂದದಿ
ಜಗದೀಶ ನೀ ಕುಣಿದಾಡುತ ಬಾರೋ – ೨ ಸಲ
ಚನ್ನಕೇಶವನೇ ಬಾರೋ

ಪಲ್ಲವಿ – ೨ ಸಲ

ದೊಡ್ಡ ದೊಡ್ಡ ಮುತ್ತಿನ ಹಾರ ಹಾಕಿ ನೋಡುವೆನೋ – ೨ ಸಲ
ನೀನು
ದೊಡ್ಡ ಪುರದ ದ್ವಾರಕಿವಾಸ ಪುರಂದರ ವಿಠಲ ಬೇಗ ಬಾರೋ – ೨ ಸಲ

ಪಲ್ಲವಿ – ೧ ಸಲ

ಬಾರೋ ಬ್ರಹ್ಮಾದಿ ವಂದ್ಯಾ – ೨ ಸಲ

* * *



## ೨೧. ವೆಂಕಟರಮಣನೆ ಬಾರೋ

**ರಾಗ : ಮಾಯಾಮಾಳವಗೌಳ** **ತಾಳ : ಆದಿತಾಳ**

ವೆಂಕಟರಮಣನೆ ಬಾರೋ । ಶೇಷಾಚಲವಾಸನೆ ಬಾರೋ ॥ ॥ ಪ ॥
ಪಂಕಜನಾಭ ಪರಮ ಪವಿತ್ರ । ಶಂಕರಮಿತ್ರನೆ ಬಾರೋ ॥ ॥ ಅಪ ॥

ಮುದ್ದು ಮುಖದ ಮಗುವೆ ನಿನಗೆ । ಮುದ್ದು ಕೊಡುವೆನು ಬಾರೋ ।
ನಿರ್ದಯವೇಕೋ ನಿನ್ನೊಳು ನಾನು । ಪೊಂದಿದ್ದೇನು ಬಾರೋ ॥ ॥ ೧ ॥

ಮಂದರ ಗಿರಿಯನೆತ್ತಿದಂಥಾ । ನಂದ ಮೂರುತಿಯೆ ಬಾರೋ ।
ನಂದನಕಂದ ಗೋವಿಂದ ಮುಕುಂದ । ಇಂದಿರೆಯರಸನೆ ಬಾರೋ ॥॥ ೨ ॥

ಕಾಮನಯ್ಯಾ ಕರುಣಾಸಾಗರ । ಶ್ಯಾಮಲವರ್ಣನೆ ಬಾರೋ ।
ಕೋಮಲಾಂಗ ಶ್ರೀ ಪುರಂದರ ವಿಠಲನೆ । ಸ್ವಾಮಿರಾಯನೆ ಬಾರೋ॥ ೩ ॥

* * *

## ೨೨. ಬಂದಾನೋ ಗೋವಿಂದ

**ರಾಗ : ಶಿವರಂಜಿನಿ** **ತಾಳ : ಆದಿತಾಳ**

ಬಂದಾನೋ ಗೋವಿಂದ । ಚಂಚದಿ ಆನಂದ ॥
ಸುಂದರಿಯ ಮಂದಿರಕ್ಕೆ । ನಂದನ ಕಂದಾ ಆ– ।
.. ನಂದನ ಕಂದ .. ॥ ಪ ॥

ಸುಂದರಾಕಾರ । ನಂದ । ಕಂದ ಗಂಭೀರ ।
ಇಂದುವದನೆಯರ ಮುಖಗ । ಳಂದ ನೋಡಿದಾ ।
ತಂದ ಕುಸುಮಾ ಕರ । ದಿಂದ ಮುಡಿಸಿದ ।
ಬಂದನೋ ಗೋ । ವಿಂದನೋ ಅರ ।
ವಿಂದ ನಯನಾ । ಅರ । ವಿಂದ ನಯನಾ ॥ ೧ ॥

ಕಾನನದಲ್ಲಿ । ಬಲುದೀನನಾಗಲ್ಲೀ ॥
ವೇಣುನಾದವೋ । ತಾ ಮೂಡಿ ಮೋದವೂ ॥
ಜಾಣನಿವನು । ಸುಮ । ಬಾಣ ಪಿತನು ॥
ಮಾನಿನಿ ಮಣಿಗಳು ಒಲಿವ । ಗಾನ ಮಾಡುತ್ತಾ ॥
.. ಗಾನ ಮಾಡುತ್ತಾ .. ॥ ೨ ॥

ಓಡಿ ಬಂದರೋ । ಬಲು । ಬೇಡಿಕೊಂಡರೋ ॥
ಗಾಡಿಕಾರನೂ । ಅವರ । ನೋಡಿ ಮೆರೆದನೋ ॥
ಮಾಡಿದ ಜಾಲ । ವಾಸುದೇವ ವಿಟ್ಠಲ ॥
ಮಾಡಿದ ಮನ ಮಾಡಿದ । ತಾ ಕೂಡಿದನಾಗ ॥
.. ತಾ ಕೂಡಿದನಾಗ .. ॥ ೩ ॥

* * *



## ೨೩. ಶೇಷಗಿರಿ ದೊರೆ ನಮ್ಮ ಶ್ರೀನಿವಾಸನ

**ರಾಗ : ನಾದನಾಮಕ್ರಿಯೆ** **ತಾಳ : ಆದಿತಾಳ**

ಶೇಷಗಿರಿ ವಾಸನಮ್ಮ ಶ್ರೀನಿ ।
ವಾಸನ ಕಂಡೆ ಶ್ರೀನಿ । ವಾಸನ ಕಂಡೆ । ಶ್ರೀನಿ ।
ವಾಸನ ಜ್ಞಾನ ಗುರು ಮಧ್ವಮುನಿ । ಮಾ ।
ನಸ ಹಂಸನ ಕಂಡೆ ॥ ॥ ಪ ॥

ಗರುಡ ಶೇಷ ಗಿರಿಜಾರಮಣ ಸುರನರರೆಲ್ಲ
ನಿರುತ ಸೇವಿಸುವ ಪಾದ ಸರಸಿಜಾಯುಗಳನ್ನ ಕಂಡೆ ॥ ॥ ೧ ॥

ಮಾನಿನೀ ರಮಾದೇವಿ ಬಣ್ಣಿಸುತಲೀ
ದಾನವಂತಕನ ಪಾದ ಜಾನು ಜಂಘಗಳನ್ನ ಕಂಡೆ ॥ ॥ ೨ ॥

ಪರಮಾತ್ಮನ್ನ ಗುಣಗಳನ್ನು ವರ್ಣಿಸುತಲೀ
ಸಿರಿ ದೇವಿ ಇರುವ ವಕ್ಷಸ್ಥಳವನ್ನು ಕಣ್ಣಾರೆ ಕಂಡೆ ॥ ॥ ೩ ॥

ದಾಸನಾದರ್ಜುನನ ರಥದ ಮುಂದೆ ನಿಲ್ಲುವನ
ಏಸು ಮಹಿಮೆಯಿಂದ ಇರುವ ಹರಿಯ ಹಸ್ತಂಗಳನೆ ಕಂಡೆ ॥ ॥ ೪ ॥

ಹಾರ ಪದಕ ಉಂಗುರ ಕೀರೀಟ ಕುಂಡಲ
ಮಾರ ಜನಕ ಧರಿಸಿದ ಆಭರಣದ ಸೊಬಗನ್ನು ಕಂಡೆ ॥ ॥ ೫ ॥

ಮಂದಗಮನೆ ಗೋಪಿ ಕಂದ ಬಾ ಎಂದೆತ್ತಲೂ
ಮಂದಹಾಸದಿಂದ ನಗುವ ಸುಂದರಾ ವದನನ್ನ ಕಂಡೆ ॥ ॥ ೬ ॥

ಕುಕ್ಷೀಯೊಳೀರೇಳು ಜಗವ ರಕ್ಷಿಸುವವನಾ
ಪಕ್ಷಿಯಾ ಹೆಗಲೇರಿ ಬರುವ ಲಕ್ಷ್ಮಿಯಾ ರಮಣನ್ನ ಕಂಡೆ ॥ ॥ ೭ ॥

ಮಂಡೂಕಾದಿ ಪರ್ವತದಲ್ಲಿ ನೆಲೆಯಾಗಿಪ್ಪನಾ
ಪುಂಡರೀಕಾಕ್ಷನ ಸಿರಿ ವೆಂಕಟ ವಿಠಲನ ಕಂಡೆ ॥ ॥ ೮ ॥

* * *

## ೨೪. ಕನಸು ಕಂಡೇ ನಾ ಮನದಲಿ ಕಳವಳಕಳೆದೇನೆ

ರಾಗ : ಮೋಹನ ತಾಳ : ಆದಿತಾಳ

ಏನ ಹೇಳಲಿ ತಂಗೀ ತಿಮ್ಮಯ್ಯನ ಪಾದವನು ಕಂಡೆ ।
ಕನಸ ಕಂಡೇನೇ ಮನಸಿನ ಕಳವಳ ಗೊಂಡೇನೆ ॥ ॥ ಪ ॥

ಪೊನ್ನದ ಕಡಗವಿಟ್ಟು । ತಿಮ್ಮಯ್ಯತಾ । ಚಲ್ವ ನಾಮವನಿಟ್ಟು ।
ಚನ್ನಾಗಿ ಘಲುಕೆನ್ನುತಾ । ಎನ್ನ ಮುಂದೆ । ಬಂದು ನಿಂತಿದ್ದನಲ್ಲೆ ॥ ॥ ೧ ॥

ಮಕರ ಕುಂಡಲವಿಟ್ಟು । ತಿಮ್ಮಯ್ಯತಾ । ಕಸ್ತೂರಿ ಪಣೆಗಿಟ್ಟು ।
ರುಕುಮಿಣಿ ಸಹಿತಾಗೀ । ಸ್ವಾಮಿತಾ । ಬಂದು ನಿಂತಿದ್ದನಲ್ಲೆ ॥ ॥ ೨ ॥

ಮುತ್ತಿನ ಪಲ್ಲಕ್ಕಿ । ಯತಿಗಳು । ಹೊತ್ತುನಿಂತಿದ್ದರಲ್ಲೆ ॥
ಛತ್ರ ಚಾಮರದಿಂದ । ರಂಗಯ್ಯನ । ಉತ್ಸವ ಮೂರುತಿಯಾ ॥ ॥ ೩ ॥

ತೊಯಜ ಮಧ್ಯದಲಿ । ಕೃಷ್ಣಯ್ಯತಾ । ಬಂದು ನಿಂತಿದ್ದನಲ್ಲೇ ॥
ವಾಯು ಬೊಮ್ಮಾದಿಗಳು । ರಂಗಯ್ಯನಾ । ಸೇವೆ ಮಾಡುವರಲ್ಲೇ ॥ ॥ ೪ ॥

ನವರತ್ನ ಕೆತ್ತಿಸಿದ । ಸ್ವಾಮಿ ಎನ್ನ । ಹೃದಯ ಮಂಟಪದಲ್ಲಿ
ಸರ್ವಾಭರಣದಿಂದ । ಪುರಂದರ । ವಿಠಲನ ಕೂಡಿದೇನೆ ॥ ॥ ೫ ॥

* * *



## ೨೫. ತಿರುಪತಿ ವೆಂಕಟ ರಮಣ

ರಾಗ : ಖರಹರಪ್ರಿಯ ತಾಳ : ಆದಿ

ತಿರುಪತಿ ವೆಂಕಟ ರಮಣ । ನಿನ । ಗೇತಕೆ ಬಾರದು ಕರುಣ ॥ ॥ ಪ ॥
ಬೆರೆದೆ ನಿನ್ನಯ ಚರಣ । ಪರಿ । ಪಾಲಿಸ ಬೇಕೋ ಕರುಣ ॥ ॥ ಅ ಪ ॥

ಅಳಗಿರಿಯಿಂದಲಿ ಬಂದ । ಸ್ವಾಮಿ । ಅಂಜನ ಗಿರಿಯಲಿ ನಿಂದ ।
ಕೊಳಲಧ್ವನಿಯದೋ ಚಂದಾ । ನಮ್ಮ । ಕುಂಡಲ ಗಿರಿಯ ಮುಕುಂದ ॥ ॥ ೧ ॥

ಬೇಟೆಯಾಡುತ ಬಂದ । ಸ್ವಾಮಿ । ಬೆಟ್ಟದ ಮೇಲೆ ನಿಂದ ॥
ಮೀಟುಗಾರ ಗೋವಿಂದ । ಅಲ್ಲಿ । ಜೇನು ಸಕ್ಕರೆ ತಿಂದ ॥ ॥ ೨ ॥

ಮೂಡಲ ಗಿರಿಯಲಿ ನಿಂತ । ಮುದ್ದು । ವೆಂಕಟಪತಿ ಬಲವಂತ ॥
ಈಡಿಲ್ಲ ನಿನಗೆ ಶ್ರೀಕಾಂತ ಈರೇಳು ಲೋಕಕನಂತ ॥ ॥ ೩ ॥

ಆಡಿದರೆ ಸ್ಥಿರವಪ್ಪ । ಆ । ಬದ್ದಗಳಾಡಲು ಒಪ್ಪ ॥
ಬೇಡಿದ ವರಗಳನಿಪ್ಪ । ನಮ್ಮ ಮೂಡಲ ಗಿರಿ ತಿಮ್ಮಪ್ಪ ॥ ॥ ೪ ॥

ಅಪ್ಪವು ಅತಿರಸ ಮೆದ್ದ । ಸ್ವಾಮಿ । ಅಸುರರ ಕಾಲಲಿ ಒದ್ದ ॥
ಒಪ್ಪಿ ಸತಿಯರಲಿದ್ದ । ಸ್ವಾಮಿ । ಸಕಲ ದುರ್ಜನರನು ಗೆದ್ದ ॥ ॥ ೫ ॥

ಬಗೆ ಬಗೆ ಭಕ್ಷ ಪರಮಾನ್ನ । ನಾನಾ । ಬಗೆಯ ಸಕಲ ಶಾಲ್ಯನ್ನ ॥
ಬಗೆ ಬಗೆ ಸೊಬಗು ಮೋಹನ್ನ । ನಮ್ಮ । ನಗೆ ಮುಖದ ಸುಪ್ರಸನ್ನ ॥ ॥ ೬ ॥

ಕಾಶಿ ರಾಮೇಶ್ವರದಿಂದ । ಅಲ್ಲಿ । ಕಾಣಿಕೆ ಬರುವುದು ಚಂದ ।
ದಾಸರ ಕೂಡೆ ಗೋವಿಂದ । ಅಲ್ಲಿ । ದಾರಿ ನಡುವುದೆ ಚಂದ ॥ ॥ ೭ ॥

ಎಲ್ಲಾ ದೇವರ ಗಂಡ । ಅವ । ಚಿಲ್ಲರೆ ದೈವದ ಮಿಂಡ ॥
ಬಲ್ಲಿದವರಿಗೆ ಉದ್ದಂಡ । ಶಿವ । ಬಿಲ್ಲ ಮುರಿದ ಪ್ರಚಂಡ ॥ ॥ ೮ ॥

ಕಾಸುತಪ್ಪಿದರೆ ಪಟ್ಟ । ಬಡ್ಡಿ । ಕಾಸು ಬಿಡದೆ ಗಂಟು ಕಟ್ಟಿ ।
ದಾಸನೆಂದರೆ ಬಿಡಗಟ್ಟಿ । ನಮ್ಮ । ಕೇಸಕ್ಕಿ ತಿಮ್ಮಪ್ಪ ಶೆಟ್ಟಿ ॥ ॥ ೯ ॥

ದಾಸರ ಕಂಡರೆ ಪ್ರಾಣ । ತಾ । ದೇಶದೊಳಗಧಿಕ ಪ್ರವೀಣ ।
ದ್ವೇಷಿಯಗಂಟಲಗಾಣ । ನಮ್ಮ । ಈಶಗೆ ನಿತ್ಯ ಕಲ್ಯಾಣ ॥ ॥ ೧೦ ॥

ಮೋಸ ಹೋಗುವನಲ್ಲಯ್ಯಾ । ಒಂದು । ಕಾಸಿಗೆ ಒಡ್ಡುವ ಕೈಯ್ಯ ।
ಏಸು ಮಹಿಮೆಗಾರನಯ್ಯ । ನಮ್ಮ । ವಾಸುದೇವ ತಿಮ್ಮಯ್ಯ ॥ ॥ ೧೧ ॥

ಚಿತ್ತವಧಾನಪರಾಕು । ನಿನ್ನ । ಚಿತ್ತದ ದಯವಿರೆ ಸಾಕು ।
ಸತ್ಯವಾಹಿನಿ ನಿನ್ನ ವಾಕು । ನೀನು । ಪೃಥ್ವಿಯ ಜನರಿಗೆ ಬೇಕು ॥ ॥ ೧೨ ॥

ಅಲ್ಲಲ್ಲಿ ಪರಿಷೆಯ ಗುಂಪು । ಮ । ತ್ತಲ್ಲಲ್ಲಿ ತೋಪಿನತಂಪು ।
ಅಲ್ಲಲ್ಲಿ ಸೊಗಸಿನ ಸೊಂಪು । ಮ । ತ್ತಲ್ಲಲ್ಲಿ ಪರಿಮಳ ಕಂಪು ॥ ॥ ೧೩ ॥

ಅಲ್ಲಲ್ಲಿ ಜನಗಳ ಕೂಟ । ಮ । ತ್ತಲ್ಲಲ್ಲಿ ಬ್ರಾಹ್ಮಣರೂಟ ।
ಅಲ್ಲಲ್ಲಿ ಪಿಡಿದ ಕೋಲಾಟ । ಮ । ತ್ತಲ್ಲಿಂದ ಊರಿಗೆ ಓಟ ॥ ॥ ೧೪ ॥

ಪಾಪವಿನಾಶಿನಿ ಸ್ನಾನ । ಹರಿ । ಪಾದೋದಕವೇ ಪಾನಾ ।
ಕೋಪತಾಪಗಳ ನಿಧಾನ । ನಮ್ಮ । ಶ್ರೀ ಪುರಂದರ ವಿಠಲನ ಧ್ಯಾನಾ ॥ ॥ ೧೫ ॥

* * *



# ೨೬. ಬಿಡೆನೋ ನಿನ್ನಂಘ್ರಿ ಶ್ರೀನಿವಾಸಾ

**ರಾಗ : ಕಲ್ಯಾಣಿ** **ತಾಳ : ಆದಿ**

ಬಿಡೆನೋ ನಿನ್ನಂಘ್ರಿ ಶ್ರೀನಿವಾಸಾ । ಎನ್ನ ।
ದುಡಿಸಿಕೊಳ್ಳೆಲೋ ಶ್ರೀನಿವಾಸಾ ।
ನುಡಿಯೇ ಜಿತವಲ್ಲೋ ಶ್ರೀನಿವಾಸಾ । ನನ್ನ ।
ನಡೆತಪ್ಪು ಕಾಯೋ ಶ್ರೀನಿವಾಸಾ ॥ ॥ ಪ ॥

ಬಡಿಯೋ ಬೆನ್ನಲ್ಲಿ ಶ್ರೀನಿವಾಸಾ । ನ– ।
ನ್ನೊಡಲ ಹೊಯ್ಯದಿರೋ ಶ್ರೀನಿವಾಸಾ ।
ಬಡವನು ಕಾಣೆಲೋ ಶ್ರೀನಿವಾಸಾ । ನಿ– ।
ನ್ನೊಡಲ ಹೊಕ್ಕೆನೋ ಶ್ರೀನಿವಾಸಾ ॥ ॥ ೧ ॥

ಪಂಜು ಪಿಡಿವೆನೋ ಶ್ರೀನಿವಾಸಾ । ನಿ– ।
ನ್ನೆಂಜಲ ಬಳಿದುಂಬೆ ಶ್ರೀನಿವಾಸಾ ।
ಸಂಜೆ ಉದಯಕೆ ಶ್ರೀನಿವಾಸಾ । ಕಾ– ।
ಳಂಜಿಯ ಪಿಡಿವೆನು ಶ್ರೀನಿವಾಸಾ ॥ ॥ ೨ ॥

ಸತ್ತಿಗೆ ಚಾಮರ ಶ್ರೀನಿವಾಸಾ । ನಾ ।
ನೆತ್ತಿ ಕುಣಿವೆನೋ ಶ್ರೀನಿವಾಸಾ ।
ರತ್ನದ ಹಾವಿಗೆ ಶ್ರೀನಿವಾಸಾ । ನಾ ।
ಹೊತ್ತಿನಲಿವೆನೋ ಶ್ರೀನಿವಾಸಾ ॥ ॥ ೩ ॥

ಹೇಳಿದಂತಾಲಿಪೆ ಶ್ರೀನಿವಾಸಾ । ನಿ– ।
ನ್ನಾಳಿಗಾಳಾಗಿಹೆ ಶ್ರೀನಿವಾಸಾ ।
ಊಳಿಗವ ಮಾಳ್ಪೆ ಶ್ರೀನಿವಾಸಾ । ನನ್ನ ।
ಪಾಲಿಸೋ ಬಿಡದೆಲೆ ಶ್ರೀನಿವಾಸಾ ॥ ॥ ೪ ॥

ನಿನ್ನ ನಾಮ ಹೋಳ್ಗೆ ಶ್ರೀನಿವಾಸಾ । ಕಳ್ಳ ।
ಕುನ್ನಿ ನಾನೆಲ್ಲೋ ಶ್ರೀನಿವಾಸಾ ।
ನಿನ್ನವರೊದ್ದರೆ ಶ್ರೀನಿವಾಸಾ । ಎನ ।
ಗಿನ್ನು ಲಜ್ಜೆ ಏಕೆ ಶ್ರೀನಿವಾಸಾ ॥ ॥ ೫ ॥

ಬೀಸಿ ಕೊಲ್ಲುವರೆ ಶ್ರೀನಿವಾಸಾ । ಮುದ್ರೆ ।
ಕಾಸಿ ಚುಚ್ಚಲವರೆ ಶ್ರೀನಿವಾಸಾ ।
ಘಾಸಿಗಂಜನಯ್ಯ ಶ್ರೀನಿವಾಸಾ । ಎಂಜ ।
ಲಾಸೆಯ ಬಂಟ ನಾ ಶ್ರೀನಿವಾಸಾ ॥ ॥ ೬ ॥

ಹೇಸಿ ನಾನಾದರೆ ಶ್ರೀನಿವಾಸಾ । ಹರಿ ।
ದಾಸರೊಳು ಪೊಕ್ಕೆನೊ ಶ್ರೀನಿವಾಸಾ ।
ಭಾಷೆಯ ಕೇಳಿಹೆ ಶ್ರೀನಿವಾಸಾ । ಆ– ।
ವಾಸೆಯ ಪೂರೈಸೊ ಶ್ರೀನಿವಾಸಾ ॥ ॥ ೭ ॥

ತಿಂಗಳಿನವನಲ್ಲ ಶ್ರೀನಿವಾಸಾ । ವತ್ಸ ।
ರಂಗಳಿಗವನಲ್ಲ ಶ್ರೀನಿವಾಸಾ ।
ಜಂಗಳ ಸವಡಿಪೆ ಶ್ರೀನಿವಾಸಾ । ಭ– ।
ವಂಗಳ ದಾಟುವೆ ಶ್ರೀನಿವಾಸಾ ॥ ॥ ೮ ॥

ನಿನ್ನವ ನಿನ್ನವ ಶ್ರೀನಿವಾಸಾ । ನಾ–
ನನ್ಯರನರಿಯೆನೊ ಶ್ರೀನಿವಾಸಾ ।
ಮನ್ನಿಸೊ ತಾಯ್ತಂದೆ ಶ್ರೀನಿವಾಸಾ । ಪ್ರ ।
ಸನ್ನ ವೆಂಕಟಾದ್ರಿ ಶ್ರೀನಿವಾಸಾ ॥ ॥ ೯ ॥

* * *



## ೨೭. ನೆರೆ ನಂಬಿದೆ ಮದ್ ಹೃದಯಮಂಟಪದೊಳು

**ರಾಗ : ಶಂಕರಾಭರಣ** **ತಾಳ : ಆದಿತಾಳ**

ನೆರೆ ನಂಬಿದೆ ಮದ್ ಹೃದಯ ಮಂಟಪದೊಳು
ಪರಿಶೋಭಿಸುತಿರು ಪಾಂಡುರಂಗಾ ॥ ಪ ॥ – ೨ ಸಲ

ಶರಣ ಜನರ ಸಂಸಾರ ಮಹಾಭಯ
ಹರಣ ಕರುಣ ಸಿರಿ ಪಾಂಡುರಂಗಾ ॥ ಅ.ಪ. ॥ – ೨ ಸಲ

ಪರದೇವನೆ ನಿನ್ನ ಲೀಲಾ ಸ್ತುತಿಯನು
ನಿರುತ ಎನಗೆ ಕೊಡು ಪಾಂಡುರಂಗಾ – ೨ ಸಲ

ಪರರಾಪೇಕ್ಷೆಯ ಬಿಡಿಸಿ ನಿರಂತರ
ಪರಗತಿ ಪಥ ತೋರೊ ಪಾಂಡುರಂಗಾ ॥ ೧ ॥ – ೨ ಸಲ

ನೆರೆದಿಹ ಬಹುಪರಿ ಜನರೊಳಿದ್ದರು ಮನ
ಸ್ಥಿರವಿಡು ನಿನ್ನಲಿ ಪಾಂಡುರಂಗಾ – ೨ ಸಲ

ಪರಿ ಪರಿ ಕೆಲಸವು ನಿನ್ನ ಮಹಾ ಪೂಜೆ ॥ ೨ ॥
ನಿರುತ ಎನಗೆ ಕೊಡೊ ಪಾಂಡುರಂಗಾ – ೨ ಸಲ

ಸುಖವಾಗಲಿ ಬಹು ದುಃಖವಾಗಲಿ
ಸಖ ನೀನಾಗಿರು ಪಾಂಡುರಂಗಾ – ೨ ಸಲ

ನಿಖಿಲಾಂತರ್ಗತ ವ್ಯಾಸ ವಿಠಲ ತವ
ಮುಖಪಂಕಜ ತೋರೊ ಪಾಂಡುರಂಗಾ ॥ ೩ ॥ – ೨ ಸಲ

* * *

# ೨೮. ಡಂಗುರವ ಸಾರಿರಯ್ಯ ಡಿಂಗರಿಗೆಲ್ಲರು

**ರಾಗ : ನಾದನಾಮಕ್ರಿಯೆ** **ತಾಳ : ಆದಿ**

ಡಂಗುರವ ಸಾರಿರಯ್ಯ ಡಿಂಗರಿಗೆಲ್ಲರು । ಭೂ – ೨ ಸಲ
ಮಂಡಲಕ್ಕೇ । ಭೂ – ೧ ಸಲ
ಮಂಡಲಕ್ಕೇ ಪಾಂಡುರಂಗ ವಿಠ್ಠಲನೆ ಪರದೈವವೆಂದು – ೧ ಸಲ
ಡಂಗುರುವ ಸಾರಿರಯ್ಯ ಡಿಂಗರಿಗರೆಲ್ಲರು – ೧ ಸಲ

ಹರಿಯು ಮುಡಿದ ಹೂವ ತುಲಸಿ । ಹರಿವಾಣದೊಳಗಿಟ್ಟುಕೊಂಡು – ೨ ಸಲ
ಹರುಷದಿಂದ ಹಾಡಿಪಾಡಿ ಕುಣಿದು ಚಪ್ಪಾಳಿಕ್ಕುತ – ೧ ಸಲ

ಒಡಲ ಜಾಂಗಟೆಯ ಮಾಡಿ । ನುಡಿವ ನಾಲಿಗೆಯಾ ಪಿಡಿದು – ೨ ಸಲ
ಬಿಡದೆ ಥಣ್ ಥಣ್ ಥಣಾರೆಂದು । ಹೊಡೆದು ಚಪ್ಪಾಳಿಕ್ಕುತ – ೨ ಸಲ

ಇಂತು ಲೋಕಕ್ಕೆಲ್ಲ ಲಕ್ಷ್ಮೀ । ಕಾಂತನಲ್ಲದಿಲ್ಲವೆಂದು – ೨ ಸಲ
ಸಂತತ ಶ್ರೀ ಪುರಂದರ । ವಿಟ್ಠಲನೇ ಪರದೈವವೆಂದು – ೧ ಸಲ

* * *



# ೨೯. ತಟಿತ್ಕೋಟಿ ನಿಭಕಾಯೊ ಜಗನ್ನಾಥ

**ರಾಗ : ಕಾಮವರ್ದಿನಿ** **ತಾಳ : ಖಂಡಛಾಪು**

ತಟಿತ್ಕೋಟಿ ನಿಭಕಾಯ ಜಗನ್ನಾಥ
ವಿಠಲಯ್ಯ ವಿಠಲಯ್ಯ । ಹರಿ । ವಿಠಲಯ್ಯ ವಿಠಲಯ್ಯ } – ೨ ಸಲ

ಭಜಿಸುವೆ ನಿನ್ನನು ಅಜ ಭವ ಸುರನುತ – ೨ ಸಲ
ಭಜಕರಮರತರು ಕುಜನ ಕುಠಾರಾ – ೨ ಸಲ
ವಿಠಲಯ್ಯ ವಿಠಲಯ್ಯ । ಹರಿ । ವಿಠಲಯ್ಯ ವಿಠಲಯ್ಯ – ೧ ಸಲ

ನೀ ಕರುಣಿಸದೆ ನಿರಾಕರಿಸಲು ಎನ್ನ – ೨ ಸಲ
ಸಾಕುವರಾರೊ ದಯಾಕರ ಮೂರುತಿ – ೨ ಸಲ

ಶರಣಾಗತರನು ಪೊರವೆನೆಂಬ ತವ – ೨ ಸಲ
ಬಿರುದ ಕಾಯೊ ಕರಿವರದ ಜಗನ್ನಾಥ – ೨ ಸಲ
ವಿಠಲಯ್ಯ ವಿಠಲಯ್ಯ । ಹರಿ । ವಿಠಲಯ್ಯ ವಿಠಲಯ್ಯ – ೧ ಸಲ

* * *

## ೩೦. ಬಂದ ಕೃಷ್ಣ ಚೆಂದದಿಂದ ಬಂದ ನೋಡೇ

**ರಾಗ : ಮೋಹನ** **ರಾಗ : ಖಂಡಛಾಪು**

ಬಂದ ಕೃಷ್ಣ ಚೆಂದದಿಂದ ಬಂದ ನೋಡೇ । ಗೋಪ ।
ವೃಂದದಿಂದಾನಂದಿಸುತ ಬಂದನೋಡೇ ॥ ಪ ॥

ಗೋವ ಮೇವ ನೀವ ದೇವಾ ಬಂದ ನೋಡೇ । ಸ್ವಾಮಿ ।
ದೇವತಾ ವಾದ್ಯಗಳಿಂದ ಬಂದ ನೋಡೇ । ॥ ೧ ॥

ಪಾಪಪೋಪ ಗೋಪರೂಪ ಬಂದ ನೋಡೇ । ಸ್ವಾಮಿ ।
ಕೋಪಾಟೋಪಾಲಾಪಲೋಪ ಬಂದನೋಡೇ । ॥ ೨ ॥

ಭೂಸುರರ ಸುಖವ ಸೂಸುತಾ ಬಂದ ನೋಡೇ । ಸ್ವಾಮಿ ।
ವಾಸುದೇವ ವಿಠಲತಾ ಬಂದ ನೋಡೇ । ॥ ೩ ॥

* * *



## ೩೧. ಕೇಶವನಾಮ

ಈಶ ನಿನ್ನ ಚರಣ ಭಜನೆ ಆಸೆಯಿಂದ ಮಾಡುವೇನು
ದೋಷರಾಶಿ ನಾಶಮಾಡೋ ಶ್ರೀಶ ಕೇಶವ ॥೧॥

ಶರಣು ಹೊಕ್ಕೆನಯ್ಯ ಎನ್ನ ಮರಣ ಸಮಯದಲ್ಲಿ ನಿನ್ನ
ಚರಣ ಸ್ಮರಣೆ ಕರುಣಿಸಯ್ಯ ನಾರಾಯಣ ॥೨॥

ಶೋಧಿಸೆನ್ನ ಭವದ ಕಲುಷ ಬೋದಿಸಯ್ಯ ಜ್ಞಾನವೆನಗೆ
ಬಾಧಿಸೂವ ಯಮನ ಬಾಧೆ ಬಿಡಿಸೊ ಮಾಧವ ॥೩॥

ಹಿಂದನೇಕ ಯೋನಿಗಳಲಿ ಬಂದು ಬಂದು ನೊಂದನಯ್ಯ
ಇಂದು ಭವದ ಬಂಧ ಬಿಡಿಸೊ ತಂದೆ ಗೋವಿಂದ ॥೪॥

ಭ್ರಷ್ಟನೆನಿಸಬೇಡ ಕೃಷ್ಣ ಇಷ್ಟು ಮಾತ್ರ ಬೇಡಿಕೊಂಬೆ
ಶಿಷ್ಟರೊಡನೆ ಇಟ್ಟು ಕಷ್ಟ ಬಿಡಿಸೊ ವಿಷ್ಣುವೆ ॥೫॥

ಮದನನಯ್ಯ ನಿನ್ನ ಮಹಿಮೆ ವದನದಲ್ಲಿ ನುಡಿಯುವಂತೆ
ಹೃದಯದೊಳಗೆ ಹುದುಗಿಸಯ್ಯ ಮಧುಸೂದನ ॥೬॥

ಕವಿದುಕೊಂಡು ಇರುವ ಪಾಪ ಸವೆದು ಪೋಗುವಂತೆ ಮಾಡೊ
ಜವನ ಬಾಧೆಯನ್ನು ಬಿಡಿಸೊ ಶ್ರೀತ್ರಿವಿಕ್ರಮ ॥೭॥

ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ
ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ ॥೮॥

ಮೊದಲು ನಿನ್ನ ಪಾದ ಪೂಜೆ ಒದಗುವಂತೆ ಮಾಡೊ ಎನ್ನ
ಹೃದಯದಲ್ಲಿ ಸದನ ಮಾಡೊ ಮುದದಿ ಶ್ರೀಧರ ॥೯॥

ಹುಸಿಯನಾಡಿ ಹೊಟ್ಟೆಹೊರೆವ ವಿಷಯದಲ್ಲಿ ರಸಿಕನೆಂದು
ಹುಸಿಗೆ ಹಾಕಬೇಡ ಎನ್ನ ಹೃಷಿಕೇಶನೆ ॥೧೦॥

ಬಿದ್ದು ಭವದಿ ಜನುಮನೇಕ ಬದ್ಧನಾಗಿ ಇರುವೆನಯ್ಯ
ಗೆದ್ದುಪೋಪ ಬುದ್ಧಿ ತೋರೊ ಪದ್ಮನಾಭನೆ ॥೧೧॥

ಕಾಮ ಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸೊ
ಶ್ರೀಮಹಾನುಭಾವನಾದ ದಾಮೋದರ ॥೧೨॥

ಪಂಕಜಾಕ್ಷ ನೀನು ಎನ್ನ ಮಂಕು ಬುದ್ಧಿಯನ್ನು ಬಿಡಿಸಿ
ಕಿಂಕರನ್ನ ಮಾಡಿಕೊಳ್ಳೊ ಸಂಕರುಷಣ ॥೧೩॥

ಏಸು ಜನ್ಮ ಬಂದರೇನು ದಾಸನಲ್ಲವೇನು ನಾನು
ಘಾಸಿ ಮಾಡಬೇಡ ಇನ್ನು ವಾಸುದೇವನೆ ॥೧೪॥

ಬುದ್ಧಿ ಶೂನ್ಯನಾಗಿ ಎನ್ನ ಕಾಯ ಬದ್ಧ ಕುಹಕ ಮನವ
ತಿದ್ದಿ ಹೃದಯ ಶುದ್ಧಿ ಮಾಡೊ ಪ್ರದ್ಯುಮ್ನನೆ ॥೧೫॥

ಜನನಿ ಜನಕ ನೀನೆ ಎಂದು ನೆನೆವೆನಯ್ಯ ದೀನ ಬಂಧು
ಎನಗೆ ಮುಕ್ತಿ ಪಾಲಿಸಿಂದು ಅನಿರುದ್ಧನೆ ॥೧೬॥

ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು ನೇಮ
ಇರಿಸು ಚರಣದಲ್ಲಿ ಪ್ರೇಮ ಪುರುಷೋತ್ತಮ ॥೧೭॥

ಸಾಧು ಸಂಗ ಕೊಟ್ಟು ನಿನ್ನ ಪಾದ ಭಜನೆಯಿತ್ತು ಎನ್ನ
ಭೇದ ಮಾಡಿ ನೋಡ ಬೇಡ ಶ್ರೀಅಧೋಕ್ಷಜ ॥೧೮॥

ಚಾರು ಚರಣ ತೋರಿ ಎನಗೆ ಪಾರುಗಾಣಿಸಯ್ಯ ಕೊನೆಗೆ
ಭಾರ ಹಾಕಿ ಇರುವೆ ನಿನಗೆ ನಾರಸಿಂಹನೆ ॥೧೯॥

ಸಂಚಿತಾರ್ಥ ಪಾಪಗಳನು ಕಿಂಚಿತಾದ ಪೀಡೆಗಳನು
ಮುಂಚಿತಾಗಿ ಕಳೆದು ಪೊರೆಯೊ ಸ್ವಾಮಿ ಅಚ್ಯುತ ॥೨೦॥

ಜ್ಞಾನ ಭಕ್ತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಎನ್ನ
ಹೀನ ಬುದ್ಧಿ ಬಿಡಿಸೊ ಇನ್ನು ಶ್ರೀಜನಾರ್ದನ ॥೨೧॥

ಜಪತಪಾನುಷ್ಠಾನ ವಿಲ್ಲ್ದೆ ಕುಪಿತಗಾಮಿಯಾದ ಎನ್ನ
ಕೃಪೆಯ ಮಾಡಿ ಕ್ಷಮಿಸಬೇಕು ಶ್ರೀಉಪೇಂದ್ರನೆ ॥೨೨॥

ಮೊರೆಯ ಇಡುವನಯ್ಯ ನಿನಗೆ ಶರಧಿಶಯನ ಶುಭಂಮತಿಯ
ಇರಿಸು ಭಕ್ತನೆಂದು ಪರಮಪುರುಷ ಶ್ರೀಹರೆ ॥೨೩॥

ಪುಟ್ಟಿಸಲೇ ಬೇಡ ಇನ್ನು ಪುಟ್ಟಿಸಿದಕೆ ಪಾಲಿಸಿನ್ನು
ಇಷ್ಟು ಮಾತ್ರ ಬೇಡಿಕೊಂಬೆ ಶ್ರೀಕೃಷ್ಣನೆ ॥೨೪॥

ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವವರ
ಅರ್ತಿಯಿಂದ ಸಲಹುತಾನೆ ಕರ್ತೃ ಕೇಶವ ॥೨೫॥

ಮರೆಯಗೊಡದೆ ಹರಿಯ ನಾಮ ಬರೆದು ಓದಿ ಕೇಳಿದವಗೆ
ಕರೆದು ಮುಕ್ತಿ ಕೊಡುವ ನೆಲೆಯ ಆದಿ ಕೇಶವ ॥೨೬॥



## ೩೨. ಶ್ರೀ ಶ್ರೀಪಾದರಾಜಗುರುಸಾರ್ವಭೌಮವಿರಚಿತ ಶ್ರೀಮನ್ಮಧ್ವನಾಮ

**ರಾಗ : ಸೌರಾಷ್ಟ್ರ** **ಝಂಪೆತಾಳ**

ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ
ಅಖಿಳಗುಣ ಸದ್ಧಾಮ ಮಧ್ವನಾಮ ॥ ಪ ॥

ಅವ ಕಚ್ಚಪರೂಪದಿಂದಲಂಡೋಕದವ
ಓವಿ ಧರಿಸಿದ ಶೇಷಮೂರುತಿಯನು
ಆವನ ಬಳಿಪಿಡಿದು ಹರಿಯ ಸುರರೈದುವರೊ
ಆ ವಾಯು ನಮ್ಮ ಕುಲ ಗುರುರಾಯನು ॥ ೧ ॥

ಆವಾನು ದೇಹದೊಳಗಿರಲು ಹರಿ ನೆಲಸಿಹನು
ಆವಾನು ತೊಲಗೆ ಹರಿ ತಾ ತೊಲಗುವ
ಆವಾನು ದೇಹದೊಳಹೊರಗೆ ನಿಯಾಮಕನು
ಆ ವಾಯು ನಮ್ಮ ಕುಲ ಗುರುರಾಯನು ॥೨॥

ಕರಣಾಭಿಮಾನಿ ದಿವಿಜರು ದೇಹವನು ಬಿಡಲು
ಕುರುಡ ಕಿವುಡನು ಮೂಕನೆಂದೆನಿಸುವ
ಪರಮ ಮುಖ್ಯಪ್ರಾಣ ತೊಲಗಲಾ ದೇಹವನು
ಅರಿತು ಪೆಣವೆಂದು ಪೇಳ್ವರು ಬುಧಜನ ॥೩॥

ಸುರೊಳಗೆ ನರರೊಳಗೆ ಸರ್ವ ಭೂತಗಳೊಳಗೆ
ಪರತರನೆನಸಿ ನೇಮದಿ ನೆಲೆಸಿಹ
ಹರಿಯನಲ್ಲದೆ ಬಗೆಯನನ್ಯರನು ಲೋಕದೊಳು
ಗುರುತಿಲಕನೂ ಮುಖ್ಯ ಪವಮಾನನು ॥೪॥

### ಶ್ರೀಹನುಮಂತದೇವರ ವರ್ಣನೆ

ತ್ರೇತೆಯಲಿ ರಘುಪತಿಯ ಸೇವೆ ಮಾಡುವೆನೆಂದು
ವಾತಸುತ ಹನುಮಂತನೆಂದೆನಿಸಿದ
ಪೋತಭಾವದಿ ತರಣಿ ಬಿಂಬಕ್ಕೆ ಲಂಘಿಸಿದ
ಈತಗೆ ಎಣೆ ಯಾರು ಮೂರ್ಲೋಕದೊಳಗೆ ॥೫॥

ತರಣಿಗಭಿಮುಖವಾಗಿ ಶಬ್ದಶಾಸ್ತ್ರವ ಪಠಿಸಿ
ಉರವಣಿಸಿ ಹಿಂದು ಮುಂದಾಗಿ ನಡೆದ
ಪರಮ ಪವಮಾನನು ಉದಯಾಸ್ತ ಶೈಲಗಳ
ಭರದಿ ಐದಿದ ಈತಗುಪಮೆಯುಂಟೇ ॥೬॥

ಅಖಿಲ ವೇದಂಗಳ ಸಾರವನು ಮುನ್ನತಾ
ನಿಖಿಳ ವ್ಯಾಕರಣ ಶಾಸ್ತ್ರವನು ಪೇಳೆ
ಮುಖದಲ್ಲಿ ಕಿಂಚಿದಪಶಬ್ದ ಇವಗಿಲ್ಲೆಂದು
ಮುಖ್ಯ ಪ್ರಾಣನ ರಾಮನನುಕರಿಸಿದ ॥೭॥

ತರಣಿಸುತನನು ಕಾಯ್ದು ಶರಧಿಯನು ನೆರೆದಾಟಿ
ಧರಣಿಸುತೆಯಳ ಕಂಡು ದನುಜರೊಡನೆ
ಭರದಿ ರಣವನೆಮಾಡಿ ಗೆಲಿದು ದಿವ್ಯಾಸ್ತ್ರಗಳ
ಉರುಹಿ ಲಂಕೆಯಿಂ ಬಂದ ಹನುಮಂತನು ॥೮॥

ಹರಿಗೆ ಚೂಡಾಮಣಿಯನಿತ್ತು ಹರಿಗಳ ಕೂಡಿ
ಶರಧಿಯನು ಕಟ್ಟಿ ಬಹು ರಕ್ಕಸರನು
ಒರೆಸಿ ರಣದಲಿ ದಶಶಿರನ ಹುಡಿಗುಟ್ಟಿ ತಾ
ಮೆರೆದ ಹನುಮಂತ ಬಲವಂತ ಧೀರ ॥೯॥

ಉರಗಬಂಧಕೆ ಸಿಲುಕಿ ಕಪಿವರರು ಮೈ ಮರೆಯೆ
ತರಣಿ ಕುಲತಿಲಕನಾಜ್ಞೆಯ ತಾಳಿ ತಾ
ಗಿರಿಸಹಿತ ಸಂಜೀವನವ ಕಿತ್ತು ತಂದಿತ್ತ
ಸುರನರರು ಸರಿಯುಂಟೆ ಹನುಮಂತಗೆ ॥೧೦॥

ವಿಜಯರಘುಪತಿಯೊಲಸಿ ಧರಣಿಸುತೆಯಳನೀತ
ಭಜಿಸಿ ಮೌಕ್ತಿಕದ ಹಾರವನು ಪಡೆದ
ಅಜಪದವಿಯನು ರಾಮ ಕೊಡಬರಲು ಹನುಮಂತ
ನಿಜಭಕುತಿಯನೆ ಬೇಡಿ ವರವ ಪಡೆದ ॥೧೧॥



**ಶ್ರೀಭೀಮಸೇನದೇವರ ವರ್ಣನೆ**

ಆ ಮಾರುತನೆ ಭೀಮನೆನಿಸಿ ದ್ವಾಪರದಲ್ಲಿ
ಸೋಮಕುಲದಲಿ ಜನಿಸಿ ಪಾರ್ಥನೊಡನೆ
ಭೀಮವಿಕ್ರಮ ರಕ್ಕಸರ ಮುರಿದು ಒಟ್ಟಿದ
ಆ ಮಹಿಮ ನಮ್ಮ ಕುಲಗುರುರಾಯನು ॥೧೨॥

ಕರದಿಂದ ಶಿಶುಭಾವನಾದ ಭೀಮನ ಬಿಡಲು
ಗಿರಿಯೊಡೆದು ಶತಶೃಂಗವೆಂದೆನಿಸಿತು
ಹರಿಗಳನು ಹರಿಗಳಿಂ ಕರಿಗಳನು ಕರಿಗಳಿಂ
ಅರೆದ ವೀರನು ಇವಗೆ ಸುರ ನರರು ಸರಿಯೇ ॥೧೩॥

ಕುರುಪ ಗರಳವನಿಕ್ಕೆ ನೆರಯುಂಡು ತೇಗುತಲಿ
ಉರಗಗಳ ಮೇಲ್ಬಿಡಲು ಅವನೊರಸಿದ
ಅರಗಿನಾ ಮನೆಯಲ್ಲಿ ಉರಿಯನಿಕ್ಕಿದ ಧೀರ
ಧರಿಸಿ ಜಾಹ್ನವಿಗೊಯ್ದ ತನ್ನನುಜರ ॥೧೪॥

ಅಲ್ಲಿದ್ದ ಬಕ ಹಿಡಂಬಕರೆಂಬ ರಕ್ಕಸರ
ನಿಲ್ಲದೊರೆಸಿದ ಲೋಕಕಂಟಕರನು
ಬಲ್ಲಿದಸುರರ ಗೆಲಿದು ದ್ರೌಪದಿಯ ಕರವಿಡಿದು
ಎಲ್ಲ ಸುಜನರಿಗೆ ಹರುಷವ ಬೀರಿದ ॥೧೫॥

ರಾಜಕುಲ ವಜ್ರನೆನಿಸಿದ ಮಾಗಧನ ಸೀಳಿ
ರಾಜಸೂಯಾಯಾಗವನು ಮಾಡಿಸಿದನು
ಆಜಿಯೊಳು ಕೌರವರ ಬಲವ ಸವರುವೆನೆಂದು
ಮೂಜಗಾವರಿಯೆ ಕಂಕಣಕಟ್ಟಿದ ॥೧೬॥

ಮಾನನಿಧಿ ದ್ರೌಪದಿಯ ಮನದ ಇಂಗಿತವರಿತು
ದಾನವರ ಸವರಲೀಬೇಕೆಂದು ಬೇಗ
ಕಾನನವ ಪೊಕ್ಕು ಕಿರ್ಮೀರಾದಿಗಳ ತರಿದು
ಮಾನಿನಿಗೆ ಸೌಗಂಧಿಕವನು ಇತ್ತ ॥೧೭॥

ದುರುಳ ಕೀಚಕನು ದ್ರೌಪದಿದೇವಿ ಚೆಲುವಿಕೆಗೆ
ಮರುಳಾಗಿ ಕರೆಕರೆಯ ಮಾಡಲವನಾ
ಗರಡಿಮನೆಯೊಳು ಕರಸಿ ಒರೆಸಿ ಅವನನ್ವಯವ
ಕುರುಪನಟ್ಟಿದ ಮಲ್ಲಕುಲವ ಸದೆದ ॥೧೮॥

ವೈರಿ ದುಶ್ಶಾಸನನ ತೊಡೆಯಮೇಲ್ಗೆಡಹುತಲಿ
ವೀರನರಹರಿಯ ಲೀಲೆಯ ತೋರಿದ
ಕೌರವರ ಬಲ ಸವರಿ ವೈರಿಗಳ ನೆಗ್ಗುತ್ತ
ಓರಂತೆ ಕೌರವಾರನ್ನೆಲ್ಲ ತರಿದ ॥೧೯॥

ಗುರುಸುತನು ಸಂಗರದಿ ನಾರಾಯಣಾಸ್ತ್ರಬಿಡೆ
ಉರವಣಿಸಿ ಬರಲು ಶಸ್ತ್ರವ ಬಿಸುಡದೆ
ಹರಿಕೃಪೆಯ ಪಡೆದಿರ್ದ ಭೀಮ ಹುಂಕಾರದೀ
ಎರಗದಲೆ ದಿವ್ಯಾಸ್ತ್ರ ನೆರೆ ಅಟ್ಟಿದ ॥೨೦॥

ನಾರಿರೋದನ ಕೇಳಿ ಮನಮರುಗಿ ಗುರುಸುತನ
ಹಾರ್ಹಿಡಿದು ಶಿರೋರತುನ ಕಿತ್ತಿ ತೆಗೆದ
ನೀರೊಳಡಗಿದ್ದ ದುರ್ಯೋಧನನ ಹೊರಗೆಡಹಿ
ಊರುಯುಗ ತನ್ನ ಗದೆಯಿಂದ ಮುರಿದ ॥೨೧॥

ಚಂಡವಿಕ್ರಮ ಗದೆಯ ಕೊಂಡು ರಣದೊಳಗೆ ಭೂ
ಮಂಡಲದೊಳುದ್ಭವಿಸಿದಖಿಳ ಖಳರ
ಹಿಂಡಿ ಬಿಸುಟಿದ ವೃಕೋದರನ ಪ್ರತಾಪವನು
ಕಂಡು ನಿಲ್ಲುವರಾರು ಈ ಭುವನದಿ ॥೨೨॥

**ಶ್ರೀಮನ್ಮಧ್ವಾಚಾರ್ಯರ ವರ್ಣನೆ**

ದಾನವರು ಕಲಿಯುಗದೊಳವತರಿಸಿ ವಿಬುಧರೊಳು
ವೇನನ ಮತವನು ಅರುಹಲದನರಿತು
ಜ್ಞಾನಿ ತಾ ಪವಮಾನ ಭೂತಳದೊಳವತರಿಸಿ
ಮಾನನಿಧಿ ಮಧ್ವಾಖ್ಯನೆಂದೆನಿಸಿದ ॥೨೩॥

ಅರ್ಭಕತನವನೀಗಿ ಬದರಿಯಲಿ ಮಧ್ವಮುನಿ
ನಿರ್ಭಯದಿ ಸಕಲ ಶಾಸ್ತ್ರಾರ್ಥಗಳ ಪಠಿಸಿ
ಉರ್ವಿಯೊಳು ಆಮ್ನಾಯದ ತತ್ತ್ವಮಾರ್ಗವನು
ಸರ್ವ ಜನರಿಗೆ ಅರುಹಿದನು ಮೋದದಿ ॥೨೪॥

ಸರ್ವೇಶ ಹರ, ವಿಶ್ವ ಎಲ್ಲ ತಾ ಪುಸಿಯೆಂಬ
ದುರ್ವಾದಿಗಳ ಮತವ ನೆರೆ ಖಂಡಿಸಿ
ಸರ್ವೇಶ ಹರಿ, ವಿಶ್ವ ಸತ್ಯವೆಂದರುಹಿದಾ
ಶರ್ವಾದಿಗೀರ್ವಾಣ ಸಂತತಿಯಲಿ ॥೨೫॥

ಏಕವಿಂಶತಿ ಕುಭಾಷ್ಯಗಳ ಬೇರನು ತರಿದು
ಶ್ರೀಕರಾರ್ಚಿತನೊಲುಮೆ ಶಾಸ್ತ್ರ ರಚಿಸಿ
ಲೋಕತ್ರಯದೊಳಿದ್ದ ಸುರರು ಆಲಿಸುವಂತೆ
ಆ ಕಮಲನಾಭಯತಿ ನಿಕರಕೊರೆದ ॥೨೬॥

ಬದರಿಕಾಶ್ರಮಕೆ ಪುನರಪಿಯೈದಿ ವ್ಯಾಸಮುನಿ
ಪದಕೆರಗಿ ಅಖಿಳ ವೇದಾರ್ಥಗಳನು
ಪದುಮನಾಭನ ಮುಖದಿ ತಿಳಿದು ಬ್ರಹ್ಮತ್ವವೈ-
ದಿದ ಮಧ್ವಮುನಿರಾಯಗಭಿವಂದಿಪೆ ॥೨೭॥

ಜಯ ಜಯತು ದುರ್ವಾದಿಮತತಿಮಿರ ಮಾರ್ತಾಂಡ
ಜಯ ಜಯತು ವಾದಿಗಜಪಂಚಾನನ
ಜಯ ಜಯತು ಚಾರ್ವಾಕಗರ್ವಪರ್ವತ ಕುಲಿಶ
ಜಯ ಜಯತು ಜಗನ್ನಾಥ ಮಧ್ವನಾಥ ॥೨೮॥

ತುಂಗಕುಲಗುರುವರನ ಹೃತ್ಕಮಲದೊಳು ನೆಲೆಸೆ
ಭಂಗವಿರದ ಸುಖವ ಸುಜನಕೆಲ್ಲ
ಹಿಂಗದೆ ಕೊಡುವ ಗುರು ಮಧ್ವರಂತರ್ಯಾಮಿ
ರಂಗವಿಟ್ಠಲನೆಂದು ನೆರೆ ಸಾರಿರಯ್ಯಾ ॥೨೯॥

**ಶ್ರೀಮಧ್ವನಾಮಕ್ಕೆ ಶ್ರೀ ಜಗನ್ನಾಥದಾಸವರ್ಯವಿರಚಿತ ಫಲಸ್ತುತಿ**

ಸೋಮಸೂರ್ಯೋಪರಾಗದಿ ಗೋಸಹಸ್ರಗಳ
ಭೂಮಿದೇವರಿಗೆ ಸುರನದಿಯ ತಟದಿ
ಶ್ರೀಮುಕುಂದಾರ್ಪಣೆನ್ನುತ ಕೊಟ್ಟ ಫಲವಕ್ಕು
ಈ ಮಧ್ವನಾಮ ಬರೆದೋದಿದವಗೆ ॥ ೧ ॥

ಪುತ್ರರಿಲ್ಲಾದವರು ಪುತ್ರರೈದುವರು ಸ
ರ್ವತ್ರದಲಿ ದಿಗ್ವಿಜಯವಾಹುದು ಸದಾ
ಶತ್ರುಗಳು ಬೀಳ್ವರಪಮೃತ್ಯು ಬರಲಂಜುವುದು
ಸೂತ್ರನಾಮಕನ ಸಂಸ್ಮೃತಿ ಮಾತ್ರದಿ ॥ ೨ ॥

ಶ್ರೀಪಾದರಾಜರುಸಿರಿದ ಮಧ್ವನಾಮ ಸಂ
ತಾಪ ಕಳೆದಖಿಳಸೌಖ್ಯವನೀವುದು
ಶ್ರೀಪತಿ ಜಗನ್ನಾಥವಿಟ್ಠಲನ ತೋರಿ ಭವ
ಕೂಪಾರದಿಂದ ಕಡೆಹಾಯಿಸುವುದು ॥ ೩ ॥

* * *



## ೩೩. ಸಮರ್ಪಣ ಗೀತೆ

ಮಧ್ಯೇಶಾರ್ಪಣ, ಮಧ್ವೇಶಾರ್ಪಣ ಮಧ್ವೇಶಾರ್ಪಣಮಸ್ತು ॥
ಶುದ್ಧಶ್ರುತಿ ಪದ್ಧತಿ ನಡೆಸುವೆ ಮಧ್ವೇಶಾರ್ಪಣಮಸ್ತು॥
ವಂದಿಸುವೆನು ಗೋವಿಂದನ ಚರಣಕೆ ಮಧ್ವೇಶಾರ್ಪಣಮಸ್ತು॥
ನಿಂದು ಕರಂಗಳ ವಂದಿಸಿ ಪ್ರಾರ್ಥನೆ ಮಧ್ವೇಶಾರ್ಪಣಮಸ್ತು॥
ಅಂಬುಜನಾಭನ ನಿತಂಬಿನಿಕಮಲಕೆ ಮಧ್ವೇಶಾರ್ಪಣಮಸ್ತು॥
ಡಿಂಗರಿಗನು ನಾ ಜಗದಂಬೆಯ ಪ್ರಾರ್ಥನೆ ಮಧ್ವೇಶಾರ್ಪಣಮಸ್ತು॥
ಸಂಧ್ಯಾದೇವಿಗೆ ವಂದಿಸುತಿರುವೆನು ಮಧ್ವೇಶಾರ್ಪಣಮಸ್ತು॥
ಒಂದಿನ ಬಿಡದೆ ತ್ರಿಕಾಲದಿ ಮಧ್ವೇಶಾರ್ಪಣಮಸ್ತು॥
ಚಾಮರ ಹಾಕುವೆ ಶ್ರೀಮನೋಹರಗೆ ಮಧ್ವೇಶಾರ್ಪಣಮಸ್ತು॥
ಕೋಮಲಶಯನದಿ ಮಲಗಿಸುವೆನು ಮಧ್ವೇಶಾರ್ಪಣಮಸ್ತು॥

ಕೃಷ್ಣನ ಮಲಗಿಸಿ ತೊಟ್ಟಿಲ ತೂಗುವೆ ಮಧ್ವೇಶಾರ್ಪಣಮಸ್ತು॥
ಬಿಟ್ಟು ಅಭಿಮತಘಟ್ಟಿಸಿ ಪಾಡುವೆ ಮಧ್ವೇಶಾರ್ಪಣಮಸ್ತು॥
ಶ್ರೀಪತಿ ತೊಟ್ಟಿಲ ಈ ಪರಿ ತೂಗುವೆ ಮಧ್ವೇಶಾರ್ಪಣಮಸ್ತು॥
ಗುರುಪುಷ್ಕರ ಸುರದ್ವಾರದಿ ಮಧ್ವೇಶಾರ್ಪಣಮಸ್ತು॥
ಕರ್ಮವು ಶಿರಿಯೆಂದು ಹರಿಗರ್ಪಿಸುವೆ ಮಧ್ವೇಶಾರ್ಪಣಮಸ್ತು॥
ದಾಸಚರಣಕೆ ನಾ ಶಿರಬಾಗುವೆ ಮಧ್ವೇಶಾರ್ಪಣಮಸ್ತು॥
ದಾಸರ ಕೃತಿ ಇಂದಿರೇಶಗರ್ಪಿಸುವೆ ಮಧ್ವೇಶಾರ್ಪಣಮಸ್ತು॥
ಮಧ್ವೇಶಾರ್ಪಣ ಮಧ್ವೇಶಾರ್ಪಣ ಮಧ್ವೇಶಾರ್ಪಣ ಮಧ್ವೇಶಾರ್ಪಣಮಸ್ತು॥

**ಶ್ರೀಕೃಷ್ಣಾರ್ಪಣಮಸ್ತು**

* * *